ಓಂ ಶ್ರೀ ಗುರು ಬಸವಲಿಂಗಾಯ ನಮಃ
866666

ಕಲ್ಯಾಣ ಕಿರಣ


ಜನವರಿ 2016

ಶರಣರ ನಡೆ ಮುಕ್ತಿಯ ಕಡೆ





ಶರಣರಿಗಾಗಿ
ವಿಶೇಷ ಸಂಚಿಕೆ



॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥
866666

ಸಂಪುಟ 47 ಬಸವ ಶಕೆ 882
ಸಂಚಿಕೆ 01 ಜನವರಿ 2016

ವಚನಾಮೃತ

ನರಜನ್ಮವ ತೊಡೆದು ಹರಜನ್ಮವ
ಮಾಡಿದ ಗುರುವೆ, ಭವಬಂಧನವ
ಬಿಡಿಸಿ ಪರಮಸುಖವ ತೋರಿದ
ಗುರುವೆ,ಭವಿಯೆಂಬುದ ತೊಡೆದು ಭಕ್ತೆ
ಎಂದೆನಿಸಿದ ಗುರುವೆ, ಚೆನ್ನಮಲ್ಲಿಕಾರ್ಜುನನ
ತಂದೆನ್ನ ಕೈವಶಕ್ಕೆ ಕೊಟ್ಟ
ಗುರುವೆ ನಮೋ, ನಮೋ.

– ಅಕ್ಕ ಮಹಾದೇವಿ

ಸಂಪಾದಕೀಯ
ಪೂಜ್ಯ ಶ್ರೀ ಡಾ. ಮಾತೆ ಮಹಾದೇವಿ.
ಪೂಜ್ಯ ಶ್ರೀ ಮಾತೆ ಕಸ್ತೂರಿ ದೇವಿ.
ಪೂಜ್ಯ ಶ್ರೀ ಬಸವಕುಮಾರ ಸ್ವಾಮೀಜಿ.
ಅಕ್ಷರ ಜೋಡಣೆ
ಬಸವ ಚಂದ್ರಿಕಾ
ಪುಟ ವಿನ್ಯಾಸ
ಪುನೀತ್.ಎಂ.ಜಿ.
ಪ್ರಸಾರ ಮೇಲ್ವಿಚಾರಣೆ
ಆರ್.ಎಸ್.ಹೊನ್ನಪ್ಪನವರ್

ಪಂಚವಾರ್ಷಿಕ ಸದಸ್ಯತ್ವ : 1000 ರೂಪಾಯಿ
ವಾರ್ಷಿಕ ಚಂದಾ : 200 ರೂಪಾಯಿ

Kalyana Kirana-R.No.19988/70. Monthly Magzine Edited and published by pujya kasthuridevi on behalf of vishva Kalyana Mission Chratible trust. Basava Mantapa, 2035, 20th Main, Rajajinagar Bangalore-560010.
Ph: 080-23131476. SMS-9945806297
E-mail: kalyanakirana1970@gmail.com

ಸಂಪಾದಕರ ನುಡಿ

ಮಾತಾಜಿ



ಕಾಯಕವೇ ಕೈಲಾಸ ಸೂತ್ರಪುರುಷ

ಗುರು ಬಸವಣ್ಣನವರು

ಸಾಹಿತಿ ಜಿ.ಎಸ್.ಸಿದ್ಧಲಿಂಗಯ್ಯನವರು ಪ್ರಶಸ್ತಿಯನ್ನು ಸ್ವೀಕರಿಸುತ್ತ ಮಾಡಿದ ಭಾಷಣದಲ್ಲಿ "ಕಾಯಕವೇ ಕೈಲಾಸ" ಎಂಬ ಮಾತನ್ನು ಗುರು ಬಸವಣ್ಣನವರು ಹೇಳಿಲ್ಲ. ಅದನ್ನು ನುಲಿಯ ಚಂದಯ್ಯನವರು ಹೇಳಿದ್ದಾರೆ ಎಂದು ನುಡಿದಿದ್ದಾರೆ. ಅನೇಕ ಸಾಹಿತಿಗಳು ಹೇಳುತ್ತಲೇ ಇರುತ್ತಾರೆ. ಸಾಮಾನ್ಯವಾಗಿ ಅನೇಕ ಸಾಹಿತಿಗಳು ಕುರುಡರು ಆನೆಯನ್ನು ಮುಟ್ಟಿ ಅಭಿಪ್ರಾಯ ಕೊಟ್ಟಂತೆ ಮಾತನಾಡುತ್ತಾರೆ. ಒಬ್ಬ ಕುರುಡ ಆನೆಯ ಕಾಲನ್ನು ಸವರಿ ಆನೆಯು ಕಂಬದಂತಿದೆ ಎಂದರೆ ಇನ್ನೊಬ್ಬ ಕುರುಡ ಕಿವಿಯನ್ನು ಸವರಿ ಆನೆಯು ಮೊರದಂತಿದೆ ಎಂದರೆ ಮತ್ತೊಬ್ಬ ಕುರುಡ ಆನೆಯ ಹೊಟ್ಟೆಯನ್ನು ಸವರಿ ಆನೆಯು ಗೋಡೆಯಂತಿದೆ ಎಂದ. ಆನೆಯನ್ನು ಸಮಗ್ರವಾಗಿ ನೋಡುವ ದೃಷ್ಟಿಶಕ್ತಿ ಕುರುಡರಲ್ಲಿ ಇಲ್ಲವಾದುದೇ ಈ ನಿರ್ಣಯಕ್ಕೆ ಕಾರಣ. ಅದೇ ರೀತಿ ಸಿದ್ಧಲಿಂಗಯ್ಯನವರದೂ ಅಭಿಪ್ರಾಯ.

ಈ ನಿರ್ಣಯಕ್ಕೆ ಪ್ರಮುಖ ಕಾರಣ ಗುರು ಬಸವಣ್ಣನವರ ಲಭ್ಯವಿರುವ ವಚನಗಳಲ್ಲಿ "ಕಾಯಕವೇ ಕೈಲಾಸ" ಎಂಬ ಘೋಷ ಸೂತ್ರ ಬಂದಿಲ್ಲ ಎಂಬುದು. ನಾವೀಗ ಕೇಳಬೇಕಾದ ಪ್ರಶ್ನೆ ಎಂದರೆ ಗುರು ಬಸವಣ್ಣನವರು ಬರೆದ ಎಲ್ಲ ವಚನಗಳೂ ಲಭ್ಯವಾಗಿವೆಯೆ? ಇಲ್ಲ. ವಿವಿಧ ಮೂಲಗಳಿಂದ ಇಂದು ಲಭ್ಯವಿರುವವು 1418 ವಚನ "ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗೀತಂಗಳ ಹಾಡಿ" ಎಂದು ತಮ್ಮೊಂದು ವಚನದಲ್ಲಿ ಗುರು ಬಸವಣ್ಣನವರು ನುಡಿಯುತ್ತಾರೆ. ಅಷ್ಟು ಸಂಖ್ಯೆಯಲ್ಲಿ ಬರೆದಿಲ್ಲವಾದರೂ ಸಾವಿರಾರು ಸಂಖ್ಯೆಯಲ್ಲಾದರೂ ಬರೆದಿರುತ್ತಾರೆ.



ಅನೇಕ ಮಹತ್ವಪೂರ್ಣ ಸಂದೇಶಗಳು, ಆದೇಶಗಳೂ ಅವುಗಳ ಮೂಲಕ ಲಭ್ಯವಾದರೆ ಲೋಪವಾಗಿದೆ. ಆದ್ದರಿಂದ ಈಗ ಸಿಕ್ಕಿರುವಷ್ಟೆ ಬಸವಣ್ಣನವರು ಬರೆದ ವಚನ ಎಂದು ಭಾವಿಸಬಾರದು. ಒಂದು ಸುಪ್ರಸಿದ್ಧ, ಜನಪ್ರಿಯ ವಚನ ಹೀಗಿದೆ:

ಶರಣ ನಿದ್ರೆಗೈದಡೆ ಜಪ ಕಾಣಿರೊ
ಶರಣನೆದ್ದು ಕುಳಿತರೆ ಶಿವರಾತ್ರಿ ಕಾಣಿರೊ
ಶರಣ ನುಡಿದುದೆ ಪಾವನ ಕಾಣಿರೊ
ಶರಣ ನುಡಿದುದೆ ಶಿವತತ್ವ ಕಾಣಿರೊ
ನಮ್ಮ ಲಿಂಗದೇವನ ಶರಣನ ಕಾಯಕವೆ
ಕೈಲಾಸ ಕಾಣಿರೊ

ಕಡೆಯ ವಾಕ್ಯದಲ್ಲಿ ಕಾಯಕವೇ ಕೈಲಾಸ ಕಾಣಿರೋ ಎಂದೇ ಮುದ್ರಣಗೊಳ್ಳುತ್ತಿದೆ. ಅದು ನಿಜವಾಗಿಯೂ "ಕಾಯಕವೇ ಕೈಲಾಸ" ಎಂದಿರಬೇಕು. ಏಕೆಂದರೆ ಇಲ್ಲಿ ವಿವಿಧ ಕ್ರಿಯೆ ಕುರಿತು ಹೇಳಲಾಗಿದೆ. ಶರಣ ನಿದ್ರೆ ಗೈಯುವುದು ಒಂದು ಕ್ರಿಯೆ, ಎದ್ದು ಕುಳಿತುಕೊಳ್ಳುವುದು ಇನ್ನೊಂದು ಕ್ರಿಯೆ, ನಡೆಯುವುದು ಮತ್ತೊಂದು ಕ್ರಿಯೆ, ನುಡಿಯುವುದು ಮಗದೊಂದು ಕ್ರಿಯೆ. ಹೀಗಾಗಿ ಕಾಯಕವೇ ಕೈಲಾಸವಾಗುವುದು ಇಲ್ಲಿ ಪ್ರಮುಖ ಕ್ರಿಯೆ. ಲಿಪಿಕಾರರು ಪ್ರತಿ ಮಾಡುವಾಗ 'ಕ' ಅಕ್ಷರ ಲೋಪವಾಗಿ 'ಕಾಯಕ'ದ ಬದಲಿಗೆ 'ಕಾಯ' ಎಂದಾಗಿದೆ. ಆದ್ದರಿಂದ ಶರಣನ ಕಾಯಕವೇ ಕೈಲಾಸ ಕಾಣಿರೊ ಎಂಬುದೇ ಸರಿ.

ಜನಪದ ಗೀತೆಯಲ್ಲಿ ಹೀಗೆ ಬರುತ್ತದೆ.

ಕಾಯಕವ ಕಲಿಸುದಕೆ ನಾಯಕನು ಬಸವಣ್ಣ
ಜೀಯ ಹೊಸಮತಕೆ ಶಿವಭಕ್ತಿ ಸಾರುದಕೆ
ರಾಯ ಜೀವನದ ಹೊಸನುಡಿಗೆ ॥
ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ತೇಜ
ಬಸವ ಕಾಯಕದ ಗುರು ಬೀಜ । ಶಿವಮತಕೆ
ಬಸವ ಓಂಕಾರ ಶಿವನಾಮ ॥

ಕಾಯಕ ತತ್ವ ಕಲಿಸುವುದಕೆ ನಾಯಕನು ಬಸವಣ್ಣ. ಹೊಸಮತಕ್ಕೆ ಕಾರಣನು, ಶಿವಭಕ್ತಿಯ ಸಾರಿದ ಈತ ಹೊಸಜ್ಞಾನಕ್ಕೆ ಕಾರಣನು ಎಂದು ಒಂದು ಗೀತೆಯಲ್ಲಿ ಬಸವ ಕಾಯಕದ ಗುರುಬೀಜ ಎಂದು ಇನ್ನೊಂದು ತ್ರಿಪದಿಯಲ್ಲಿ ಹೇಳಲಾಗಿದೆ. ಅಂದಾಗ ಕಾಯಕದ ಪರಿಕಲ್ಪನೆ ಗುರು ಬಸವಣ್ಣನವರ ಕೊಡುಗೆ ಎಂದು ಜನಪದರು ಏಕೆ ಹೇಳುತ್ತಿದ್ದರು?

ಒಂದು ದೊಡ್ಡ ಮೈದಾನವಿದೆ ಎಂದುಕೊಳ್ಳುವ. ಒಂದು ಕಡೆ ವೇದಿಕೆಯ ಮೇಲೆ ಒಬ್ಬರು ಉಪನ್ಯಾಸ ಮಾಡುತ್ತಿರುತ್ತಾರೆ. ಅವರ ಧ್ವನಿಯು ಧ್ವನಿವರ್ಧಕ ಬಾಕ್ಸ್ ಮೂಲಕ ಕೇಳುತ್ತಿರುತ್ತದೆ. ಆಗ ನಾವು ಊಹಿಸುವುದು ಏನೆಂದರೆ, ಒಬ್ಬ ವ್ಯಕ್ತಿ ನಮಗೆ ದೂರದಲ್ಲಿದ್ದು ಕಾಣಿಸದೆ ಹೋದರೂ ಅವರು ಮಾತನಾಡುತ್ತಿರುವರೆಂದು ಊಹಿಸುತ್ತೇವಲ್ಲದೆ ಧ್ವನಿವರ್ಧಕ ಬಾಕ್ಸ್ ಮಾತನಾಡುವುದೆಂದು ನಾವು ತಿಳಿಯುವುದಿಲ್ಲ. ಹಾಗೆಯೇ ಗುರು ಬಸವಣ್ಣನವರು ಎಂಬ ನೇತಾರರು ನುಡಿದ ಮೂಲಕ ಆಲೋಚನೆಗಳನ್ನು ಉಳಿದ ಶರಣರು ಪ್ರತಿಧ್ವನಿಸಿದ್ದಾರೆ. ಏಕೆಂದರೆ ತಾತ್ವಿಕ ಮೂಲಭೂತ ವಿಚಾರಗಳನ್ನು ಪ್ರತಿಪಾದನೆ ಮಾಡುವ ಶಕ್ತಿ, ಬೌದ್ಧಿಕ ಸಾಮರ್ಥ್ಯ ಎಲ್ಲರಿಗೂ ಇರುವುದಿಲ್ಲ. ಅದಕ್ಕಾಗಿಯೇ ಜನಪದರು **"ಕಾಯಕವ ಕಲಿಸುದಕೆ ನಾಯಕನು ಬಸವಣ್ಣ, ಬಸವ ಕಾಯಕದ ಗುರುಬೀಜ"** ಎಂದುಕೊಂಡಾಡಿರುವುದು. **"ಕಾಯಕವೇ ಕೈಲಾಸ"** ಎಂಬ ಮಾತು ಕೇವಲ ಘೋಷವಾಕ್ಯ (ಸ್ಲೋಗನ್) ಅಲ್ಲ ಅದರ ಹಿಂದೆ ಒಂದು ತಾತ್ವಿಕ ಪರಿಕಲ್ಪನೆ ಇದೆ. ಈ ಪರಿಕಲ್ಪನೆ ಕೊಟ್ಟವರು ಗುರು ಬಸವಣ್ಣನವರಲ್ಲದೆ ಬೇರಾರೂ ಅಲ್ಲ.

ಅಕ್ಕನ ಅಮರವಾಣಿ ಭಾಗ-25



315. ಯೋಗಿಗೆ ಶರಣು

ಆತುರದ ಧ್ಯಾನದಿಂದ ಧಾವತಿಗೊಂಡೆ;।
ಜ್ಯೋತಿರ್ಲಿಂಗವ ಕಾಣೆಸಬಾರದು.
ಮಾತಿನ ಮಾಲೆಗೆ ಸಿಲುಕುವನಲ್ಲ;
ಧಾತುಗೆಡಿಸಿ ಮನವ ನೋಡಿ ಕಾಡುವನು.
ಆತುಮನಂತರ ಪರವನರಿದಡೆ ಆತನೆ ಯೋಗಿ;
ಆತನ ಪಾದಕ್ಕೆ ಶರಣೆಂಬೆನಯ್ಯಾ
ಚೆನ್ನಮಲ್ಲಿಕಾರ್ಜುನದೇವರ ದೇವಾ.

ಪರಮಾತ್ಮನ ಹಂಬಲದಿಂದ ಅಕ್ಕನವರು ಚಟಪಟಿಸುತ್ತಿದ್ದಾರೆ. ಆತುರಾತುರವಾಗಿ ಧ್ಯಾನ ಮಾಡುತ್ತಾರೆ. ಜ್ಯೋತಿ ಸ್ವರೂಪನಾದ ದೇವರು ಕಾಣಿಸುತ್ತಿಲ್ಲ. ದೇವನು ಮಾತಿನ ಮಾಲೆಗೆ ಸಿಲುಕುವವನಲ್ಲ. ಮನದ ಸ್ಥೈರ್ಯವನ್ನು ಕೆಡಿಸುವಂತೆ ಕಾಡಿಸುವನು.

ಮೊದಲು ಆತ್ಮನ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ದೇಹಾಂತರ್ಗತವಾದ ಆತ್ಮನನ್ನು ಸಾಕ್ಷಾತ್ಕರಿಸಿಕೊಂಡ ಬಳಿಕ ಬ್ರಹ್ಮಾಂಡಾಂಗತರ್ಗತವಾಗಿರುವ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಅವನೇ ನಿಜವಾದ ಯೋಗಿ ಅಂತಹ ಯೋಗಿಯ ಪಾದಕ್ಕೆ ದೇವಾ. ನಾನು ಶರಣೆಂಬೆ.

316. ಶರಣರ ಸಂಗದಿಂದ ಅರಿತೆ

ಗಿರಿಯೊಳು ವನದೊಳು ಗಿಡಗಿಡದತ್ತ
ದೇವ, ಎನ್ನದೇವ ಬಾರಯ್ಯಾ,
ತೋರಯ್ಯಾ ನಿಮ್ಮ ಕರುಣವನೆಂದು,
ನಾನು ಅರಸುತ್ತ ಅಳಲುತ್ತ ಕಾಣದೆ
ಸುಯಿದು ಬಂದು ಕಂಡೆ. ಶರಣರ ಸಂಗದಿಂದ
ಅರಸಿ ಹಿಡಿದಿಹೆನೆಂದು; ನೀನಡಗುವ ಠಾವ
ಹೇಳಾ ಚೆನ್ನಮಲ್ಲಿಕಾರ್ಜುನದೇವರ ದೇವಾ?

ದೇವಾ ನಾನು ನಿನ್ನನ್ನು ಬೆಟ್ಟಗಳಲ್ಲಿ, ವನದಲ್ಲಿ, ಗಿಡಿಗಿಡಗಳಲ್ಲಿ ಬಾರಯ್ಯ ಎಂದು ಅರಸಿದೆ. ನಿಮ್ಮ ಕರುಣವ ತೋರಯ್ಯಾ ಎಂದು ಹಂಬಲತುಂಬಿ ಬೇಡಿಕೊಂಡೆ. ಹೊರಗಿನ ಜಗತ್ತಿನಲ್ಲಿ ನಾನು ನಿಮ್ಮನ್ನು ಅರಸಿ, ಅಳಲಿದೆ, ಬಳಲಿದೆ, ಬಿಸುಸುಯಿದೆ. ಶರಣರ ಸಂಗಕ್ಕೆ ಬಂದ ನಂತರ ಸಾಧನೆಯ ದಾರಿ ತಿಳಿಯಿತು. ನಿನ್ನನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾಯಿತು. ಇನ್ನು ನಿನ್ನಲ್ಲಿ ಅಡಗುವ ಸ್ಥಾನವಾವುದು ತಿಳಿಸು.

317. ಲಜ್ಜೆಗೆಟ್ಟು ನೆರೆವೆ

ಸಜ್ಜೆಯನುಪ್ಪರಿಸಿ ಇಷ್ಟಲಿಂಗ ಕರಸ್ಥಲಕ್ಕೆ
ಬರಲು, ಪ್ರಜ್ವಲಿಸಿ ತೊಳತೊಳಗಿ ಬೆಳಗುತ್ತಿಹ
ಕಾಂತಿಯೊಳು ಪ್ರಜ್ವಲಿಸಿ, ದೃಷ್ಟಿನಟ್ಟು ಒಜ್ಜರಿಸಿ
ಸುರಿವ ಅಶ್ರುಜಲ ಶಿವಸುಖ ಸಾರಾಯದಲ್ಲಿ
ಸಜ್ಜನಪತಿಯ ರತಿಯೊಡಗೂಡಿ ಲಜ್ಜೆಗೆಟ್ಟು ನಿಮ್ಮ
ನೆರೆದೆನು ಚೆನ್ನಮಲ್ಲಿಕಾರ್ಜುನದೇವರ ದೇವಾ.

ದೇಹದ ಮೇಲಿರುವ ಕರಡಿಗೆಯಿಂದ ಹೊರಬಂದು ಇಷ್ಟಲಿಂಗವು ಕರಸ್ಥಲದಲ್ಲಿ ಕುಳ್ಳಿರಲು ಫಳಫಳನೆ ಹೊಳೆಯುವ ಸುಂದರವಾದ ಕಪ್ಪು ಕಂಥೆಯಿಂದ ಬೆಳಗುತ್ತದೆ. ಆಗ ನನ್ನ ದೃಷ್ಟಿಯು ಅದರಲ್ಲಿ ನೆಡುತ್ತದೆ, ಕಣ್ಣುಗಳಿಂದ ಆನಂದಬಿಂದುಗಳು ಸುರಿಯುತ್ತವೆ ಲಿಂಗದೇವನೆಂಬ ಪತಿಯೊಡನೆ ನಾನು ದಿವ್ಯವಾದ ಸಾಮರಸ್ಯ ಸುಖವನ್ನು ಅನುಭವಿಸುತ್ತ ನಾಚಿಕೆಯಿಲ್ಲದೆ ದೇವನೊಡನೆ ಒಂದಾಗುತ್ತೇನೆ.

318. ಎನ್ನೊಳಗಿರ್ದೆ

ಕಾಯ ಪ್ರಸಾದವೆನ್ನ ಜೀವ ಪ್ರಸಾದವೆನ್ನ
ಪ್ರಾಣ ಪ್ರಸಾದವೆನ್ನ ಮನಪ್ರಸಾದವೆನ್ನ
ಧನ ಪ್ರಸಾದವೆನ್ನ ಭಾವ ಪ್ರಸಾದವೆನ್ನ
ಸಯದಾನ ಪ್ರಸಾದವೆನ್ನ ಸಮಭೋಗ
ಪ್ರಸಾದವೆನ್ನ. ಚೆನ್ನ ಮಲ್ಲಿಕಾರ್ಜುನದೇವರ
ದೇವಯ್ಯಾ. ನಿಮ್ಮ ಪ್ರಸಾದವ ಹಾಸಿ
ಹೊದಿಸಿಕೊಂಡಿಪ್ಪೆನು.

ದೇವಾ, ನಿನ್ನ ಪೂರ್ಣಾನುಗ್ರಹವಾಗಿ ಕಾರುಣ್ಯದ ಧಾರೆಯಲ್ಲಿ ಮಿಂದಿದ್ದೇನೆ. ಹೀಗಾಗಿ ನನ್ನ ಶರೀರವು ದೈವೀಕರಣಗೊಂಡಿದೆ. ಜೀವ, ಪ್ರಾಣ, ಮನ, ಧನ, ಭಾವ ಎಲ್ಲವೂ ಪ್ರಸಾದಮಯವಾಗಿವೆ. ನಾನು ಬಳಸುವ ಸಾಮಾಗ್ರಿಗಳೆಲ್ಲವೂ ದೈವೀಕರಣಗೊಂಡಿವೆ. ನಾನು ನಿನ್ನೊಡನೆ ಎಲ್ಲ ಸುಖಗಳನ್ನು ಅನುಭವಿಸುತ್ತಿದ್ದೇನೆ. ನಾನು ನಿನ್ನೊಡನೆ ಉಣ್ಣುತ್ತಿದ್ದೇನೆ; ಉಡುತ್ತಿದ್ದೇನೆ, ನಿದ್ರಿಸುತ್ತಿದ್ದೇನೆ. ಹೀಗೆ ನಿಮ್ಮ ಅನುಗ್ರಹವನ್ನು ಹಾಸಿಕೊಂಡು ಹೊದ್ದುಕೊಂಡು ಬದುಕುತ್ತಿದ್ದೇನೆ.

319. ಸತ್ಯ ಸದಾಚಾರ

ಅಯ್ಯಾ ಪರಾತ್ಪರ ಸತ್ಯ ಸದಾಚಾರ
ಗುರು ಲಿಂಗ ಜಂಗಮದ ಶ್ರೀಚರಣವನ್ನು
ಹಿಂದೆ ಹೇಳಿದ ಅಚ್ಚಪ್ರಸಾದಿ ಯೋಪಾದಿಯಲ್ಲಿ
ನಿರ್ವಂಚಕತ್ವದಿಂದ ಗುರುಲಿಂಗಜಂಗಮಕ್ಕೆ
ಅರ್ಥಪ್ರಾಣಾಭಿಮಾನವ ಸಮರ್ಪಿಸಿ
ಒಪ್ಪತ್ತು ಅಷ್ಟವಿಧಾರ್ಚನೆಯ ಮಾಡಿ, ಆ
ಕರಣೋದಕ ಪ್ರಸಾದವನ್ನು
ತನ್ನ ಸರ್ವಾಂಗದಲ್ಲಿ ನೆಲೆಸಿರ್ಪ ಇಷ್ಟ
ಮಹಾಲಿಂಗದೇವಂಗೆ
ಕೊಟ್ಟು ಕೊಂಬಂತಹದೆ ಇದಿರಿಟ್ಟು

ಜಂಗಮ ಪಾದೋದಕ ಪ್ರಸಾದವ ಕೊಂಬ
ಆಚರಣೆಯ ನಿಲುಕಡೆ ನೋಡಾ.
ಆಮೇಲೆ ಒಪ್ಪತ್ತು ಸಂಬಂಧವಿಟ್ಟು
ಆಚರಿಸುವ ನಿಲುಕಡೆ ಎಂತೆಂದೊಡೆ:
ಅಯ್ಯಾ ನಿನ್ನ ಷಟ್‌ಸ್ಥಾನದಲ್ಲಿ ನೆಲೆಸಿರ್ಪ
ಇಷ್ಟಮಹಾಲಿಂಗದೇವನ
ತ್ರಿವಿಧಸ್ಥಾನದಲ್ಲಿ 'ಓಂ ಬಸವಣ್ಣಾ ಚೆನ್ನಬಸವಣ್ಣ
ಅಲ್ಲಮಪ್ರಭು' ವೆಂಬ
ತ್ರಿವಿಧ ನಾಮಸ್ವರೂಪವಾದ
ಷೋಡಶಾಕ್ಷರಂಗಳೆ ಷೋಡಶ ವರ್ಣವಾಗಿ
ನೆಲೆಸಿಪ್ಪರು ನೋಡಾ.

ಇಂತು ಷೋಡಶ ಕಳಾಸ್ವರೂಪವಾದ
ಚಿದ್ಘನ ಮಹಾಲಿಂಗದೇವನ
ನಿರಂಜನ ಜಂಗಮೋಪಾದಿಯಲ್ಲಿ
ಸಗುಣ ನಿರ್ಗುಣ ಪೂಜೆಯ ಮಾಡಿ
ಜಂಗಮ ಚರಣ ಸೋಂಕಿನಿಂ ಬಂದ
ಗುರುಪಾದೋದಕವಾದಡೂ ಸರಿಯೆ,
ಅದು ದೊರೆಯದಿದ್ದಡೆ,
ಲಿಂಗಾಣತಿಯಿಂ ಬಂದೊದಗಿದ
ಪರಿಣಾಮದುದಕವಾದಡೂ ಸರಿಯೆ,
ಒಂದು ಭಾಜನದಲ್ಲಿ ಸೂಕ್ಷ್ಮದಿಂ ರಚಿಸಿ
ಆ ಉದಕದೊಳಗೆ ಹಸ್ತೋದಕ
ಮಂತ್ರೋದಕ ಭಸ್ಮೋದಕವ ಮಾಡಿ. ಆ
ಮೇಲೆ ಅನಾದಿ ಮೂಲಪ್ರಣವ ಪ್ರಸಾದ
ಪ್ರಣವದೊಳಗೆ ಅಖಂಡ ಜ್ಯೋತಿಪ್ರಣವ,
ಅಖಂಡ ಮಹಾಜ್ಯೋತಿಪ್ರಣವ
ಲಿಖಿತವಮಾಡಿ,
ಶುದ್ಧಾದಿಯಾದ ಪೂರ್ಣಭಕ್ತಿಯಿಂದ

ಮಹಾಚಿದ್ಘನತೀರ್ಥವೆಂದು ಭಾವಿಸಿ
ಪಂಚಾಕ್ಷರ ಷಡಕ್ಷರ ಮಂತ್ರಧ್ಯಾನದಿಂದ
ಅನಿಮಿಷದೃಷ್ಟಿಯಿಂ ನಿರೀಕ್ಷಿಸಿ,
ಮೂರು ವೇಳೆ ಶರಣು ಮಾಡಿ,

ಆ ಚಿದ್ಘನ ತೀರ್ಥವನ್ನು ದ್ವಾದಶದಳ
ಕಮಲದ ಮಧ್ಯದಲ್ಲಿ ನೆಲೆಸಿರ್ಪ
ಇಷ್ಟ ಮಹಾಲಿಂಗ ಜಂಗಮಕ್ಕೆ

ಅಷ್ಟವಿಧ ಮಂತ್ರ ಸಕೀಲಂಗಳಿಂದ
ಆಚಾರಾದಿ ಶೂನ್ಯಾಂತವಾದ ಅಷ್ಟವಿಧ
ಲಿಂಗಧ್ಯಾನದಿಂದ ಅಷ್ಟವಿಧ ಬಿಂದುಗಳ
ಸಮರ್ಪಿಸಿದಲ್ಲಿಗೆ
ಅಷ್ಟವಿಧೋದಕವಾಗುವುದಯ್ಯಾ
ಆ ಇಷ್ಟಮಾಹಾಲಿಂಗ ಜಂಗಮವೆತ್ತಿ
ಅಷ್ಟದಶ ಮಂತ್ರ ಸ್ಮರಣೆಯಿಂದ
ಮುಗಿದಲ್ಲಿಗೆ ನವವಿಧೋದಕವಾಗುವುದಯ್ಯಾ
ಉಳಿದೋದಕವ ತ್ರಿವಿಧ ಪ್ರಣವಧ್ಯಾನದಿಂದ
ಮುಕ್ತಾಯವ ಮಾಡಿದಲ್ಲಿಗೆ
ದಶವಿಧೋದಕವೆನಿಸುವುದಯ್ಯಾ

ವಿ.ಸೂ: ಮೇಲಿನ ವಚನದ ಅರ್ಥವನ್ನು ಮುಂದಿನ ಸಂಚಿಕೆಯಲ್ಲಿ ತಿಳಿಸಲಾಗುವುದು.

ಓದುಗರಿಗೆ ವಿಶೇಷ ಸೂಚನೆ

ಶರಣ ಬಂಧುಗಳೆ ನೀವು ಉತ್ತಮ ಚಿಂತಕರು ಹಾಗೂ ಲೇಖಕರಾಗಿ ದ್ದಲ್ಲಿ ವಿಶೇಷ ಲೇಖನಗಳನ್ನು ಡಿಟಿಪಿ ಮಾಡಿ **basavakumaraswa-miji@gmail.com** ಮೇಲ್ ಅಡ್ರೆಸ್‌ಗೆ ಲೇಖನಗಳನ್ನು ಕಳಿಸಬಹುದು.

ನಿಮ್ಮ ಕುಟುಂಬದಿಂದಲೂ ಶರಣರ ಹಬ್ಬಗಳಿಗೆ ಶುಭಾಶಯ ಕೋರಬಹುದು. ಕುಟುಂಬದ ಅಥವಾ ಒಬ್ಬರ ಫೋಟೋ ಕಳುಹಿಸದರೆ ನಿಮ್ಮ ಫೋಟೊ ವನ್ನು ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ.

ಶ್ರೀ ಬಸವ ಕುಮಾರ ಸ್ವಾಮೀಜಿ
ಮೊ.9449588669.

ಬ್ಲಾಗ್‌ನಲ್ಲಿ ಕಲ್ಯಾಣ ಕಿರಣ

12ನೇ ಶತಮಾನದಲ್ಲಿ ಗುರು ಬಸವಣ್ಣನವರು ಧರ್ಮ ಹಾಗೂ ವಚನಗಳನ್ನು ಪ್ರಪಂಚಾದ್ಯಂತ ಪ್ರಚಾರ ಮಾಡಿ ಎಲ್ಲರನ್ನು ಭೇದವಿಲ್ಲದೆ ಆಕರ್ಷಿಸಿದ್ದರು. ಅವರ ಅನುಯಾಯಿಗಳಿಂದ ಕಾಯಕವೇ ಕೈಲಾಸ, ದಾಸೋಹವೇ ದೇವಧಾಮ ಎಂಬ ಮಹಾಮಂತ್ರ ಅನುಷ್ಠಾನಕ್ಕೆ ತಂದು ಕಲ್ಯಾಣ ರಾಜ್ಯ ಕಟ್ಟಿದ್ದರು.


ವಿಶ್ವ ಕಲ್ಯಾಣ ಮಿಷನ್‌ನ "ಕಲ್ಯಾಣ ಕಿರಣ" ಮಾಸಪತ್ರಿಕೆ 46 ವರ್ಷಗಳಿಂದ ಸೇವೆ ಮಾಡುತ್ತಾ ಬಂದಿದೆ. ಮೇ 2015 ರಿಂದ **http://kalyanakirana.over-blog.com/** ಬ್ಲಾಗ್‌ನಲ್ಲಿ ಪತ್ರಿಕೆಯನ್ನು ಚಿತ್ತರಿಸಲಾಗುತ್ತಿದೆ. ಇಂಟರ್ನೆಟ್ ಮುಖಾಂತರ ಕಂಪ್ಯೂಟರ್, ಮೊಬೈಲ್‌ಗಳಲ್ಲಿ ಪತ್ರಿಕೆ ಓದಿ ಲಾಭವನ್ನು ಪಡೆಯುವಿರೆಂದು ತುಂಬು ಹೃದಯದಿಂದ ಹಾರೈಸುವೆವು.

ತೋರಿದವರು ಯಾರು?











ಅಪ್ಪ ಬಸವಣ್ಣನ ಅರಿಯುವಂತೆ,
ನಮ್ಮಲ್ಲಿ ಅರಿವು ಮೂಡುವಂತೆ
ಮೂಡಿದವರು ಯಾರು?
ಬಸವಣ್ಣನ ತಿಳಿಯುವಂತೆ
ನಮ್ಮ ಮನ ತಿಳಿಯಾಗುವಂತೆ
ಮಾಡಿದವರು ಯಾರು?
ಅಂಗದ ಮೇಲೆ ಲಿಂಗವ ಧರಿಸುವಂತೆ
ಬಸವಣ್ಣನ ಮನದಲ್ಲಿಧರಿಸುವಂತೆ,
ಮಾಡಿದವರು ಯಾರು?
ಶರಣತತ್ವ ಬಿತ್ತಿದವರು
ಬಿದ್ದವರ ನೆತ್ತಿದವರು ಯಾರು?
ಬಸವ ತತ್ವ ಸಾರಿದವರು
ಅದನು ಸೂರೆಗೈದವರು ಯಾರು?
ನಾವು ತಲೆಎತ್ತಿ ನಡೆಯುವಂತೆ
ಸತ್ಯವನ್ನೇ ನುಡಿಯುವಂತೆ ಮಾಡಿದವರು ಯಾರು?
ಹೆಮ್ಮೆಯಿಂದ ಬೀಗುವಂತೆ
ಧರ್ಮಕ್ಕಾಗಿ ಬಾಗುವಂತೆ ಮಾಡಿದವರು ಯಾರು?
ದರ್ಪದಿಂದ ನಡೆಯುತ್ತಿದ್ದ, ಕುತರ್ಕದಿಂದ ಧರ್ಮವನ್ನು
ನುಡಿಯುತ್ತಿದ್ದ ಸ್ವಾಮಿಗಳ ಹಮ್ಮು ಬಿಮ್ಮು ಇಳಿಸಿದವರು ಯಾರು?
ಬಸವಣ್ಣನ ನಾಡಿಗೆಲ್ಲ ತಿಳಿಸಿದವರು,
ಬಸವ ತತ್ವ ಉಳಿಸಿದವರು ಆತತ್ವ ಬೆಳೆಸಿದವರು
ಅದರಿಂದ ಕೀರ್ತಿಗಳಿಸಿದವರು ಯಾರು?
ನಕಲಿಸ್ವಾಮಿಗಳ ಬಾಯ ಮುಚ್ಚಿದವರು
ಒಳ್ಳೆಯವರ ಮೆಚ್ಚಿದವರು
ಎಲ್ಲರನ್ನು ಧರ್ಮಕ್ಕಾಗಿ ಕರೆದವರು ಯಾರು?
ಅಲ್ಲಿಗೆ ನಮ್ಮನೆಲ್ಲಾ ಬರಮಾಡಿಕೊಂಡವರುಯಾರು?
ಕೊಟ್ಯಾಧೀಶ ಆಸ್ತಿವಂತ ಸ್ವಾಮಿಗಳೇ?
ಜಾತಿಯದೊಡ್ಡ ಸಮಾಜ ಹೊಂದಿದ ಸ್ವಾಮಿಗಳೇ? ಅಲ್ಲ.....
ನಮ್ಮ ಪೂಜ್ಯ ಲಿಂಗಾನಾದ ಅಪ್ಪಾಜಿ ಹಾಗೂ
ಡಾ. ಮಾತಾಜಿ ಅಲ್ಲವೆ ?

* ಲೇಖಕರು: ಬಾಣೂರು ಚನ್ನಪ್ಪ, ಕಲ್ಯಾಣನಗರ, ಚಿಕ್ಕಮಗಳೂರು

ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ

ಲಂಡನ್ ತಲುಪಿದ ಬಸವ ಬೆಳಕು



ಕಣ್ಣಿಗೆ ಕಾಣುವ ಈ ಸುಂದರವಾದ ಜಗತ್ತನ್ನು ಸುಳ್ಳು, ನಶ್ವರ ಎಂದು ಹೇಳುತ್ತ, ಕಣ್ಣಿಗೆ ಕಾಣದ ದೇವನೊಬ್ಬನೆ ಸತ್ಯ ಎಂದು ಮುಗ್ಧ ಜನರನ್ನು ನಂಬಿಸಿ ವೇದಾಂತಿಗಳು ಜನಮನದಲ್ಲಿ ಭ್ರಾಂತಿಯನ್ನು ಮೂಡಿಸಿದ್ದರು. ಇದರಿಂದ ಜನರು ಪಲಾಯನವಾದಿಗಳಾಗತೊಡಗಿದರು. ನಿರಾಶಾವಾದಿಗಳಾದರು. ಲೌಕಿಕ ಬದುಕಿಗೆ ಬೆಲೆ ಕೊಡದೆ; ಕಾಲ್ಪನಿಕ ಪಾರಲೌಕಿಕದ ಆಶೆಯಿಂದ ಈ ಸುಂದರವಾದ ಬದುಕನ್ನು ನರಕ ಸದೃಶವಾಗಿಸಿಕೊಂಡರು. ಸತ್ತ ಮೇಲೆ ಸ್ವರ್ಗ ಸಿಗುವುದೆಂಬ ಭ್ರಾಂತಿಯಿಂದ ಇಹಲೋಕದ ಬಾಳನ್ನು ಹಾಳು ಮಾಡಿಕೊಳ್ಳುವವರೆ ಹೆಚ್ಚಾದರು. ಆಗ ಅವತರಿಸಿ ಬಂದವರು ಗುರು ಬಸವಣ್ಣನವರು. ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದೆ ಈ ಮಹಾಮನೆಯ ಮಾಲಿಕನಾದ ಲಿಂಗದೇವನು ಬಸವಣ್ಣನವರನ್ನು ಕಳುಹಿಸಿದನು. ಆ ಗುರು ಬಸವಣ್ಣನವರು ಬಂದು ಕಲ್ಯಾಣವೆಂಬ ಶಿವಪುರವನ್ನು ಕೈಲಾಸವ ಮಾಡಿದರು ಎಂದು ಅಲ್ಲಮಪ್ರಭು ದೇವರು ಹೇಳುತ್ತಾರೆ.

'ದೇವಲೋಕ ಮೃತ್ಯುಲೋಕ ಬೇರಿಲ್ಲ ಕಾಣಿರೋ' ಸತ್ಯವ ನುಡಿವುದೆ ದೇವಲೋಕ, ಮಿಥ್ಯವ ನುಡಿವುದೆ ಮೃತ್ಯುಲೋಕ ಆಚಾರವೆ ಸ್ವರ್ಗ, ಅನಾಚಾರವೇ ನರಕ, ಕಾಯಕವೇ ಕೈಲಾಸ, ದಾಸೋಹ 'ವೆ ದೇವಧಾಮ ಎಂಬಿತ್ಯಾದಿ ಮುತ್ತಿನ ಹಾರದಂತಹ ಗುರು ಬಸವಣ್ಣನವರ ಮಾತುಗಳು ಜನ ಸಾಮಾನ್ಯರನ್ನು ಬಲು ಬೇಗನೆ ಲೋಹ ಚುಂಬಕದಂತೆ ಆಕರ್ಷಿಸಿದವು. ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ ಚಲ್ಲಿದನು ತಂದು ಶಿವ ಬೆಳಕ. ಚೆಲ್ಲಿದನು ತಂದು ಶಿವಬೆಳಕ ನಾಡೊಳಗೆ ಸೊಲ್ಲೆತ್ತಿ ಜನವು ಹಾಡುವುದು ಎಂದು ಸ್ವರವೆತ್ತಿ ಎಲ್ಲರೂ ಹಾಡಲಾರಂಭಿಸಿದರು. ಬಸವನಾಮವು ಮಹಾಮಂತ್ರವಾಯಿತು. ಶಿವಮಂತ್ರವಾಯಿತು, ನವಪ್ರಣವವಾಯಿತು. ಅದು ಉತ್ತಿ ಬಿತ್ತುವ ಮಂತ್ರವಾಯಿತು. ಬಿತ್ತಿ ಬೆಳೆಯುವ ಮಂತ್ರವಾಯಿತು ಜೀವನತಾರಕ ಮಂತ್ರವದಾಯಿತು. ಬೆಳಗು ಮೂಡುವ ಮುನ್ನ ನಿದ್ರೆಯಿಂದ ತಿಳಿದೆದ್ದು ತೊಳಗಿ ಬೆಳಗುವ ಗುರುಬಸವಣ್ಣನ ನೆನೆದು ಅಸಂಖ್ಯಾತರು ತಮ್ಮ ಬಾಳನ್ನು ಚಿನ್ಮಯವನ್ನಾಗಿ ಮಾಡಿಕೊಂಡರು.

ಶೋಷಣೆಯ ಕೇಂದ್ರಗಳಾದ ದೇಗುಲಗಳನ್ನು ಧಿಕ್ಕರಿಸಿ ಮೃಣ್ಮಯ ದೇಹದಲ್ಲಿ ದೇವರನ್ನು ತೋರಿದವರು ಗುರುಬಸವಣ್ಣನವರು. ಬೆವರಿನ ಹನಿಯಲ್ಲಿ, ಹೆಣ್ಣು ಮಕ್ಕಳ ಕಣ್ಣೀರು ಒರೆಸುವಲ್ಲಿ, ದೀನ-ದಲಿತರ ಸೇವೆಯಲ್ಲಿ ಲಿಂಗದೇವನನ್ನು ಕಂಡವರು ಕಾಯಕಯೋಗಿ ಗುರು ಬಸವಣ್ಣನವರು ಶ್ರೇಷ್ಠ ಕುಲದಲ್ಲಿ ಹುಟ್ಟಿ ತಮ್ಮ ಕುಲವ ಬೆರೆಸದೆ ಮಾನವ ಕುಲ ಒಂದೇ ಎಂದು ಸಾರಿ ಸಮಾನತೆಯ ರಾಜ್ಯ ನಿರ್ಮಿಸಿದ ಸಮತಾವಾದಿ ಗುರುಬಸವಣ್ಣನವರು ವಿಶ್ವಗುರುವಾದರು.

ಕಲ್ಯಾಣ ಕ್ರಾಂತಿಯ ನಂತರ ಬಸವ ಸುತರು ಹತ್ತು ಹಲವು ದಿಕ್ಕಿಗೆ ಚದುರಿದರು. ಶರಣರಾದ ಹರಳಯ್ಯ-ಮಧುವರಸ ಮತ್ತು ಶೀಲವಂತರು ಆನೆ ಕಾಲಿಗೆ ಆಹುತಿಯಾಗಿ ಹುತಾತ್ಮರಾದರು. ಗುರುಬಸವಣ್ಣನವರು ಗಡಿಪಾರಿನ ದಂಡಗೊಂಡರು. ಶಿಕ್ಷೆಗೆ ಒಳಗಾದರು. ಕಲ್ಯಾಣದ ಗಡಿ ದಾಟಿ ಕೂಡಲ ಸಂಗಮದತ್ತ ಸಾಗಿ ಅಲ್ಲಿಯೇ ಲಿಂಗೈಕ್ಯರಾದರು. ಚಿನ್ಮಯಜ್ಞಾನಿ ಚನ್ನಬಸವಣ್ಣನವರು ವೀರಗಣಾಚಾರಿ, ಮಡಿವಾಳ ಮಾಚಿದೇವರು, ಕ್ರಾಂತಿಗಂಗೋತ್ರಿ ಅಕ್ಕನಾಗಮ್ಮನವರು ಉಳವಿಯ ಕಾಡಿನಲ್ಲಿ ವಚನ ಸಾಹಿತ್ಯವನ್ನು ರಕ್ಷಿಸಿದರು. ಶ್ರೀ ಚನ್ನಬಸವಣ್ಣನವರು ಇಲ್ಲಿಯೇ ಉಳಿವೆ ಎಂದು ಲಿಂಗೈಕ್ಯರಾದರು. ಆಗಿನಿಂದ ಅದು ಉಳವಿ ಕ್ಷೇತ್ರವಾಯಿತು.

780 ವರ್ಷಗಳ ನಂತರ ಮತ್ತೆ ಬರುತ್ತೇವೆ ಎಂದು ಆದಿ ಶರಣರು ಭವಿಷ್ಯ ನುಡಿದಿದ್ದಾರೆ. ಅವರ ಕಾಲಜ್ಞಾನದ ವಚನಗಳಿಂದಲೇ ಅದನ್ನು ತಿಳಿದುಕೊಳ್ಳಬಹುದು.

'ದಕ್ಷಿಣದ ಕೃಷ್ಣೆಗೆ ಕರೆವರಯ್ಯ ಜನ ನೆರೆವರಯ್ಯ' ಎಂದು ವೀರ ಗಣಾಚಾರಿ ಮಾಚಿದೇವರು ನುಡಿದಿರುವುದು ; ಅಕ್ಷರಶಃ ಸತ್ಯವಾಗಿದೆ. 1988ರಲ್ಲಿ ಕೃಷ್ಣಾ ನದಿಯ ದಕ್ಷಿಣ ಭಾಗದಲ್ಲಿರುವ ಕೂಡಲ ಸಂಗಮ ಕ್ಷೇತ್ರದಲ್ಲಿ ಬಸವ ಧರ್ಮ ಪೀಠದ ಮಹಾಮನೆಯ ಆವರಣದಲ್ಲಿ ಪ್ರಪ್ರಥಮ ಐತಿಹಾಸಿಕ ಶರಣ ಮೇಳ ಆರಂಭವಾಯಿತು. ಪೂಜ್ಯಶ್ರೀ ಮಹಾಜಗದ್ಗುರು ಲಿಂ. ಲಿಂಗಾನಂದ ಮಹಾಸ್ವಾಮೀಜಿಯವರು ಮತ್ತು ಈಗಿನ ಬಸವ ಧರ್ಮ ಪೀಠಾಧ್ಯಕ್ಷರಾಗಿರುವ ಪೂಜ್ಯಶ್ರೀ ಮಹಾಜಗದ್ಗುರು ಡಾ|| ಮಾತೆ ಮಹಾದೇವಿಯವರ ದಿವ್ಯ ಸಾನಿಧ್ಯ ಹಾಗೂ ಮಾರ್ಗದರ್ಶನದಲ್ಲಿ ಅಂದಿನಿಂದ ಇಂದಿನವರೆಗೆ ಅತ್ಯಂತ ಯಶಸ್ವಿಯಾಗಿ ಸಾಗಿ ಬಂದಿದೆ. 29ನೇ ಶರಣ ಮೇಳವು ಇದೇ ತಿಂಗಳ (ಜನವರಿ) 11 ರಿಂದ 15ರ ವರೆಗೆ ಅತ್ಯಂತ ಯಶಸ್ವಿಯಾಗಿ ಪೂರ್ಣಗೊಂಡಿತು. ಕರ್ನಾಟಕದ ಪ್ರತಿಯೊಂದು ಹಳ್ಳಿಯಿಂದಲ್ಲದೆ ನೆರೆರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರ, ತೆಲಂಗಾಣ, ತಮಿಳುನಾಡು, ಕೇರಳ, ಗೋವಾ, ದೆಹಲಿ ರಾಜ್ಯಗಳಿಂದ ಮತ್ತು ಪುಣೆ, ಮುಂಬೈ, ಹೈದರಾಬಾದ್ ಮುಂತಾದ ಮಹಾನಗರಗಳಿಂದ ಜನಸಾಗರ ಹರಿದು ಬರುವುದನ್ನು ನೋಡಿದಾಗ ಇದು ಒಬ್ಬ ವ್ಯಕ್ತಿಯಿಂದ ನಡೆಯುತ್ತಿರುವ ಕಾರ್ಯಕ್ರಮವಲ್ಲ ಬಸವಾತ್ಮಜೆ ಎಂಬ ದೈವೀಶಕ್ತಿಯಿಂದ ಎಂದು ಮನವರಿಕೆಯಾಗದಿರದು.

ಕೆಲವು ಜನ ಇದ್ದೂ ಸತ್ತಂತೆ ಬದುಕುತ್ತಾ-ರೆ. ಮತ್ತೆ ಕೆಲವರು ಇದ್ದು ಇದ್ದಂತೆ ತಮ್ಮ ಪಾಡಿಗೆ ತಾವು ಬದುಕಿರುತ್ತಾರೆ ಆದರೆ, ಪ್ರವಾದಿಗಳು, ಮಹಾತ್ಮರು, ದಾರ್ಶನಿಕರು ಸತ್ತರೂ ಬದುಕಿರುತ್ತಾರೆ. ಬದುಕಿದ್ದಾಗಲೂ ತಮ್ಮೆಡೆಗೆ ಲಕ್ಷಾಂತರ ಅನುಯಾಯಿಗಳನ್ನು ಸೆಳೆದು ಉದ್ಧರಿಸುತ್ತಾರೆ. ಐಕ್ಯವಾದ ನಂತರವೂ ತಮ್ಮ ಐಕ್ಯ ಮಂಟಪದತ್ತ (ಸಮಾಧಿ) ಲಕ್ಷಾಂತರ ಭಕ್ತರನ್ನು ಆಕರ್ಷಿಸುತ್ತಾರೆ ಎಂಬುದಕ್ಕೆ ಗುರುಬಸವಣ್ಣನವರ ಐಕ್ಯ ಮಂಟಪವೇ ಸಾಕ್ಷಿಯಾಗಿದೆ. ಲಿಂಗಾಯತ ಧರ್ಮ ಸಂಸ್ಥಾಪನಾ ದಿನ (ಕ್ರಿ.ಶ, 1155) ದ ಅಂಗವಾಗಿ ಜನವರಿ ದಿನಾಂಕ:14 ಸಂಕ್ರಾಂತಿ (ಬಸವಕ್ರಾಂತಿ) ಯ ದಿನದಂದು ನಾವು ಮತ್ತು ಪೂಜ್ಯ ಶ್ರೀ ಜಗದ್ಗುರು ಗಂಗಾ ಮಾತಾಜಿಯವರು ಹಾಗೂ ಬಸವ ಧರ್ಮ ಪೀಠದ ಇನ್ನಿತರ ಜಂಗಮ ಮೂರ್ತಿಗಳು ಸಹಸ್ರಾರು ಭಕ್ತರೊಂದಿಗೆ ಗುರುಬಸವಣ್ಣನವರ ಲಿಂಗೈಕ್ಯ ಮಂಟಪಕ್ಕೆ ಪೂಜೆದರ್ಶನಕ್ಕಾಗಿ ಮಂಟಪದಲ್ಲಿ ಇಳಿಯುವಾಗ ಅದ್ಭುತ ಆನಂದ ಎನಿಸಿ ಮೈ ರೋಮಾಂಚನವೆನಿಸಿತು.

ಪುಟ 13ರಲ್ಲಿ ಮುಂದುವರಿಯುವುದು...

ಇಷ್ಟಲಿಂಗೋಪಾಸನೆ

ವೈಜ್ಞಾನಿಕ ಅರಿವು

ಶ್ರೀ ಬಸವ ಕುಮಾರ ಸ್ವಾಮೀಜಿ



ಈ
ಅಂಗಾಂಗ
ಯೋಗದಲ್ಲಿ ಮೂರು
ಭಾಗಗಳು ಬರುತ್ತವೆ.

1-ಪದಾರ್ಥ ತ್ಯಾಗ
2-ಪ್ರಸಾದ ಭೋಗ
3-ಲಿಂಗ ಯೋಗ

ಮೊಟ್ಟಮೊದಲನೆಯದಾಗಿ ಈ ಸಾಧಕನು ಪದಾರ್ಥತ್ಯಾಗ ಮಾಡಬೇಕು.ಹಾಗೆಂದರೇನು? ಶರೀರದಲ್ಲಿರುವ ಪಂಚಕರ್ಮೇಂದ್ರಿಯಗಳು,ಪಂಚಜ್ಞಾನೇಂದ್ರಿಯ ಹಾಗೂ ಅಂತ:ಕರಣಗಳು. ಸಹಜವಾಗಿ ಸೃಷ್ಟಿ ನೇಮದಂತೆ ಅವುಗಳ ಕ್ರಿಯೆ ಸಾಗಿರುತ್ತದೆ.ವಾಕ್, ಪಾಣಿ, ಪಾದ, ಗುದ, ಗುಹ್ಯ. ಇವು ಪಂಚಕರ್ಮೇಂದ್ರಿಯಗಳು

(ವಾಕ್) ಬಾಯಿ: ಸಹಜವಾಗಿ ಇಲ್ಲಿ ಎರಡು ಕ್ರಿಯೆಗಳು(ಕಾರ್ಯ) ನೆರವೇರಿಸುವುದು. ಒಂದನೇದ್ದು ಮಾತನಾಡುವುದು,ಎರಡನೇದ್ದು ರುಚಿಸುವುದು. ಒಂದು ಕಡೆ ದಾಸರು ನಾಲಿಗೆಗೆ ಬುದ್ದಿಯನ್ನು ಹೇಳುತ್ತಾರೆ."ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯನು ಬಿಡು"ಎಂದು "ಮಾತು ಬಲ್ಲವ ಮಾಣಿಕ್ಯ ತಂದ, ಮಾತು ಬಲ್ಲದವ ಜಗಳ ತಂದ". ಒಮ್ಮೆ ಬೀರಬಲ್ಲನನ್ನು

ಅಕ್ಬರ್ ಬಾದಶಹ ಬೇರೆ ದೇಶಕ್ಕೆ ರಾಜನನ್ನು ಭೇಟಿಯಾಗಿ ಕುಶಲ ಸಮಾಚಾರ ವಿಚಾರಿಸಿಕೊಂಡು ಬರಲು ಕೆಲವು ಸಿಬ್ಬಂದಿಯನ್ನು ಅಂದರೆ ಕೆಲವು ಪಂಡಿತರನ್ನು ಜೋಡಿ ಮಾಡಿ ಕಳುಹಿಸಿಕೊಟ್ಟ, ಆ ರಾಜನೂ ಸಹ ಒಳ್ಳೇ ಪ್ರತಿಭಾವಂತ, ಕೀರ್ತಿಯುಳ್ಳವನಾಗಿದ್ದನು. ಅಲ್ಲಿಗೆ ಹೋದಾಗ ಬೀರಬಲ್ಲನ ಜಾಣ್ಮೆಯನ್ನು ಪರೀಕ್ಷಿಸುವುದಕ್ಕಾಗಿ ಒಂದು ಮಾತನ್ನು ಪ್ರಶ್ನೆ ಮಾಡಿದ."ನಾನು ಶ್ರೇಷ್ಟನೋ? ನಿಮ್ಮ ರಾಜ ಅಕ್ಬರ್ ಮಹಾರಾಜ ಶ್ರೇಷ್ಟನೋ? ಎಂದು. ಆ ಸಮಯದಲ್ಲಿ ಬೀರಬಲ್ ಹೇಳಿದ "ನೀವು ಅಂದರೆ ಹುಣ್ಣಿಮೆಯ ಪೂರ್ಣಚಂದ್ರನಿದ್ದಂತೆ, ನಮ್ಮ ಅಕ್ಬರ್ ಮಹಾರಾಜ ಬಿದಿಗೆಯ ಚಂದ್ರನಿದ್ದಂತೆ". ಅಂದಾಗ ಆ ಮಹಾರಾಜನು ತುಂಬಾ ಸಂತೋಷಭರಿತನಾಗಿ ಆತನನ್ನು ತುಂಬಾ ಗೌರವಿಸಿ ರೇಷ್ಮೆ ಶಾಲು ಹೊದಿಸಿ ಮುತ್ತಿನ ಹಾರ ಹಾಕಿ ಬಂಗಾರದ ತಟ್ಟೆಯಲ್ಲಿ ಮುತ್ತುರತ್ನಗಳನ್ನಿತ್ತು ಮೃಷ್ಟಾನ್ನ ಭೋಜನವನ್ನು ಮಾಡಿಸಿದ.ಆ ಸಂದರ್ಭದಲ್ಲಿ ಜೊತೆಗೆ ಬಂದ ಪಂಡಿತ ಮಹಾಶಯರುಗಳು ಆ ಮಾತುಗಳನ್ನು ಕೇಳಿ ಅಸಮಾಧಾನಗೊಂಡು ಒಳಗೊಳಗೆ ತುಂಬಾ ಮುನಿಸಿಕೊಂಡು ತಮ್ಮ ಅಕ್ಬರ್ ಮಹಾರಾಜನಿಗೆ ಹೇಳಿ ಬೀರಬಲ್‌ನನ್ನು ಬೈಸಿ ಅವಮಾನಗೊಳಿಸಬೇಕೆಂದು ಹೊಂಚು ಹಾಕಿದರು.ರಾಜನು ಕಳುಹಿಸಿಕೊಟ್ಟ ಸಂದೇಶ ಹಾಗೂ ಕುಶಲ ಸಮಾಚಾರಗಳನ್ನು ಔಪಚಾರಿಕವಾಗಿ ಮಾಡಿ ಹಿಂತಿರುಗಿದರು.ಬಂದ ತಕ್ಷಣವೇ ಪಂಡಿತ ಮಹಾಶಯರು ಅಕ್ಬರ್ ಮಹಾರಾಜನಿಗೆ ಚಾಡಿ ಹೇಳಿದರು. ಮಹಾರಾಜ್ ನಿಮ್ಮ ವ್ಯಕ್ತಿತ್ವಕ್ಕೆ, ನಿಮ್ಮ ಕೀರ್ತಿಗೆ ಕಳಂಕ ತರುವಂಥ ಮಾತುಗಳನ್ನಾಡಿ ಬಂದಿದ್ದಾನೆ .ಬೀರಬಲ್ಲನು ನಮಗೆ ತುಂಬಾ ನೋವಾಗಿದೆ. ಏನು ಅಂತಾ ಕುತೂಹಲದಿಂದ ರಾಜ ಕೇಳಿದ. "ನಿಮ್ಮ ಮಹಾರಾಜ ಶ್ರೇಷ್ಟನೋ? ಅಥವಾ ನಾನು ಶ್ರೇಷ್ಟನೋ?" ಅಂತಾ. ಆ ಸಮಯದಲ್ಲಿ ಹೀಗೆ ಹೇಳಬೇಕು? "ನೀವಂದರೆ ಹುಣ್ಣಿಮೆಯ ಪೂರ್ಣಚಂದ್ರ,ನಮ್ಮ ಅಕ್ಬರ್ ಮಹಾರಾಜ ಬಿದಿಗೆಯ ಚಂದ್ರನಿದ್ದಂತೆ ಅಂತಾ.ನಮಗೆಲ್ಲಾ ಈ ಮಾತುಗಳನ್ನು ಕೇಳಲಿಕ್ಕೆ ಆಗಲಿಲ್ಲಾ.ಆಗ ಮಹಾರಾಜ ತುರಂತವಾಗಿ ಬೀರಬಲ್ಲನಿಗೆ ಬರಲು ಹೇಳಿ,ಏನು ಬೀರಬಲ್ಲ ಹೀಗೆ ಹೇಳಬೇಕೆ? ನನ್ನ ವ್ಯಕ್ತಿತ್ವಕ್ಕೆ ಚ್ಯುತಿ ತಂದಿದ್ದೀಯಾ ನಿನ್ನನ್ನು ಶಿಕ್ಷಿಸಬೇಕಾಗುತ್ತದೆ ಅಂದಾ.ಆಗ "ಮಹಾರಾಜ್ ನಾನೇನು ನಿಮ್ಮ ಕೀರ್ತಿಯನ್ನು, ವ್ಯಕ್ತಿತ್ವವನ್ನು ಕಡಿಮೆ ಮಾಡಿರುವೆನೆ? ಇಲ್ಲಾ ಹಾಗೆಂದರೇನು? ಬಿಡಿಸಿ ಹೇಳು.ಪೂರ್ಣಚಂದ್ರ ಅಂದರೆ ಮರುದಿವಸದಿಂದ ಅವನ ಪ್ರಕಾಶ ಕಡಿಮೆಯಾಗುತ್ತ ಕ್ಷೀಣವಾಗುತ್ತ ಬರುತ್ತಾನೆ. ಆದರೆ ಬಿದಿಗೆಯ ಚಂದ್ರ ದಿನದಿನಕ್ಕೆ ಬೆಳೆಯುತ್ತಾ ತನ್ನ ಪ್ರಕಾಶವನ್ನು ಹೆಚ್ಚಿಸುತ್ತಾ ಹುಣ್ಣಿಮೆಯ ವರೆಗೆ ಪೂರ್ಣಚಂದ್ರನಾಗುತ್ತಾನೆ. ಅದರಂತೆ ನಿಮ್ಮ ಕೀರ್ತಿ ,ವ್ಯಕ್ತಿತ್ವ ಬೆಳೆಯುತ್ತಾ ಹೋಗುತ್ತೆ. ಅವನ ಕೀರ್ತಿ,ವ್ಯಕ್ತಿತ್ವ ಕಡಿಮೆಯಾಗುತ್ತ ಹೋಗುತ್ತದೆ ಮಹಾರಾಜ್" ಅಂದಾಗ ಅಕ್ಬರ್ ಮಹಾರಾಜನಿಗೆ ಅತೀವ ಆನಂದವಾಗಿ ದೊಡ್ಡ ಸಭೆಯನ್ನು ಏರ್ಪಡಿಸಿ ಎಲ್ಲ ಪಂಡಿತ,ವಿದ್ವಾಂಸರು,ಮಹಾಜನಗಳ ಮಧ್ಯೆ ಜರತಾರಿ ಬಟ್ಟೆಗಳನ್ನು,ಬಂಗಾರದ ನಾಣ್ಯಗಳನ್ನು ಬೆಳ್ಳಿ ತಟ್ಟೆಯಲ್ಲಿರಿಸಿ ರಾಜ ಮಾರ್ಯಾದೆಯಿಂದ ಗೌರವಿಸಿದ.ಇದರರ್ಥ ಮಾತು ಮಾಣಿಕ್ಯವಾದಂತೆ.ಎಲ್ಲಿಯೇ ಹೋಗಲಿ ಏನೇ ಮಾಡಲಿ.ಏನೇ ಹೇಳಲಿ ಎಲ್ಲವೂ ಜಾಣತನ-ಬುದ್ಧಿವಂತಿಕೆಯಿಂದ ಸಾಗಬೇಕು.ಚಾಡಿ ಹೇಳಿದ ಪಂಡಿತರಿಗೆಲ್ಲ ಅವಮಾನವಾಯಿತು.ಮೂರ್ಖರ ಹೃದಯ ನಾಲಿಗೆಯಲ್ಲಿರುತ್ತದೆ.ಆದರೆ ಬುದ್ಧಿವಂತರ ನಾಲಿಗೆ ಹೃದಯಲ್ಲಿರುತ್ತದೆ. ಮಾತನಾಡಿ ವಿಚಾರಿಸುವುದು,ವಿಚಾರಿಸಿ ಮಾತನಾಡುವುದು.ಹೀಗೆ ನಾಲಿಗೆಯಿಂದ ಅನುಚಿತವಾದ ನುಡಿಗಳನ್ನು ಆಡುವುದನ್ನು ನಿಯಂತ್ರಿಸುವುದೇ ಪದಾರ್ಥ ತ್ಯಾಗದಲ್ಲಿ ಬರುತ್ತದೆ.ಇನ್ನು

ಪಾಣಿ ಅಂದರೆ ಕೈ: ಕೈಯಿಂದ

ಅದ್ಭುತವಾದುದ್ದಷ್ಟನ್ನೇ ಮಾಡಿ ಕಳ್ಳತನ,ಇನ್ನೊಬ್ಬರಿಗೆ ಬಡಿಯುವುದು, ಕೈಯಲ್ಲಿ ಚಾಕು ಹಿಡಿದು ಇರಿಯುವುದು, ಪಿಸ್ತೂಲ, ಬಂದೂಕ ಬಳಸಿ ಇನ್ನೊಬ್ಬರನ್ನು ಕೊಲ್ಲುವುದು. ಹೀಗೆ ಹಲವಾರು ರೀತಿಯಿಂದ ನಡೆಯುವ ಕೃತಿಗಳನ್ನು ನಿಲ್ಲಿಸುವುದೇ ಪದಾರ್ಥ ತ್ಯಾಗ

ಪಾದ : ಪಾದ ಎಲ್ಲಿ ಇರುತ್ತವೆಯೋ ಅಲ್ಲಿ ನಾವಿರುತ್ತೇವೆ ಯಾವುದೇ ಕಾರ್ಯಗಳನ್ನು ಕೈಗೊಳ್ಳಲು ಹೋಗಬೇಕೆಂದಡೆ ನೆಲೆ ನಿಂತು ಮಾಡಲು ಪಾದಗಳು ಅವಶ್ಯವಾಗಿ ಬೇಕೆ ಬೇಕು. ಈ ಪಾದಗಳು ಹೋಗಬಾರದ ಜಾಗೆಗೆ ಹೋಗುತ್ತವೆ. ಚಿತ್ರಮಂದಿರಕ್ಕೆ, ಬಾರ್‌ಗಳಿಗೆ, ವೇಶ್ಯೆಯರ ಮನೆಗೆ, ಕಳ್ಳತನ ಮಾಡಲಿಕ್ಕೆ, ದರೋಡೆ ಮಾಡಲಿಕ್ಕೆ, ಕೊಲೆ ಮಾಡಲಿಕ್ಕೆ, ತನ್ನ ಸತಿಯಿದ್ದು ಪರಸ್ತ್ರೀಯನ್ನು ಭೋಗಿಸಲಿಕ್ಕೆ ಹೋಗುವುದು,ಅಕ್ರಮವಾಗಿ ಬೇರೆ ದೇಶದ ಗಡಿಯೊಳಕ್ಕೆ ನುಸುಳುವುದು ಹೀಗೆ ನಾನಾರೀತಿಯಿಂದ ಪಾದಗಳು ಹೋಗುವುದನ್ನು ನಿಯಂತ್ರಿಸುವುದೇ ಪಾದದ ಪದಾರ್ಥ ತ್ಯಾಗ.

ಗುದ: ಶರೀರದ ಪೂರ್ಣ ಭಾರವನ್ನು ಹೊರುವ ಮತ್ತು ಅಪಾನವಾಯು, ಮಲವಿಸರ್ಜನೆ ಮಾಡುವದಕ್ಕೆ ಈ ಭಾಗ ಮಹತ್ವದ ಪಾತ್ರ ವಹಿಸುವುದು ಆಹಾರ ಸ್ವೀಕರಿಸುವಾಗ ಸಾತ್ವಿಕ ಹಾಲು ಹಣ್ಣು ಹಂಪಲ ತರಕಾರಿ ಸೊಪ್ಪು ಮಿತವಾಗಿ ಸ್ವೀಕರಿಸಿ ಮೂಲವ್ಯಾದಿ ಬರದಂತೆ ನಿಗ್ರಹಿಸುವುದೇ ಪದಾರ್ಥ ತ್ಯಾಗ್ಯ

ಗುಹ್ಯ: ಈ ಸ್ಥಾನ ಅನವಶ್ಯಕವಾದ ದ್ರವ ಪದಾರ್ಥವನ್ನು ಹೊರಹಾಕುವ ಭೋಗಿಸಿದ ಆಹಾರದಿಂದ ತಯಾರಾದ ವೀರ್ಯವನ್ನು ಸಂತಾನೋತ್ಪತ್ತಿ, ಮಲಿನವಾದ ರಕ್ತ ಹೊರಹೋಗುವ ಸ್ಥಾನ, ಹೆಣ್ಣು ಗಂಡು ಅನೀತಿಯಿಂದ ವರ್ತಿಸದೆ ಉದಾತ್ತೀಕರಣಗೊಳಿಸುವ ಸ್ಥಾನ. ಇದರ ಹೊರತಾಗಿ ಅನ್ಯಮಾರ್ಗಕ್ಕೆ ಎಳೆಸದಂತೆ ನಿಗ್ರಹಿಸುವುದೇ ಪದಾರ್ಥ ತ್ಯಾಗ.

ಇನ್ನು ಜ್ಞಾನೇಂದ್ರಿಯಗಳು : ಕಣ್ಣು,

ಕಿವಿ,ಮೂಗು,ನಾಲಿಗೆ,ಚರ್ಮ

ಕಣ್ಣು: ಇದೊಂದು ಜಗತ್ತಿನ ಮಾನವರಿಗೆಲ್ಲ ಅವಶ್ಯವಾಗಿ ಬೇಕಾಗಿರುವ ಇಂದ್ರಿಯ. ಯಾವುದನ್ನು ನೋಡಿದರೂ ವಿಕಾರವಾಗುವುದನ್ನು ತಡೆಯುವುದೇ ಪದಾರ್ಥತ್ಯಾಗ.

ಕಿವಿ: ಇದೂ ಸಹ ಅದ್ಭುತವಾದ ಇಂದ್ರಿಯ. ಯಾವುದನ್ನು ಕೇಳುವುದರಿಂದ ನಮ್ಮ ಮನಸ್ಸು ಕೆರಳುವುದೋ, ಕೇಳಿ ಮನೆಯ ಕುಟುಂಬವನ್ನು ಒಡೆಯುವುದೋ ಚಾಡಿ ಮಾತು ಕೇಳಿಯೇ ಸಂಸ್ಥಾನಗಳು, ರಾಜ್ಯಗಳು, ದೇಶಗಳು, ಜಗತ್ತು ಹಾಳಾಗಿ ಹೋಗುವುದೋ ಅದನ್ನು ತಡೆದು ನಿಗ್ರಹಿಸುವುದೇ, ಅದು ಕಿವಿಯ ಪದಾರ್ಥತ್ಯಾಗ.

ಮುಂದುವರಿಯುವುದು...

*** ಓದುಗರಿಗೆ ವಿಶೇಷ ಸೂಚನೆ ***

ಕಲ್ಯಾಣ ಕಿರಣ ಮಾಸಪತ್ರಿಕೆಯಲ್ಲಿ ವಿವಾಹ, ನಾಮಕರಣ, ಗೃಹ (ಗುರು)ಪ್ರವೇಶ, ಲಿಂಗೈಕ್ಯ ದಿನಾಚರಣೆ, ಶರಣರ ಹಬ್ಬ ಉತ್ಸವಗಳಿಗೆ ಹಾಗೂ ಇತರ ಯಾವುದೇ ಶುಭಕಾರ್ಯಕೆಗಳನ್ನು ಪ್ರಕಟಿಸಲು ಇಚ್ಛಿಸುತ್ತಿದ್ದೇವೆ. ಹೆಚ್ಚಿನ ಮಾಹಿತಿಗೆ ಕೂಡಲೇ ಸಂಪರ್ಕಿಸಿ:

ಪೂಜ್ಯಶ್ರೀ ಜಗದ್ಗುರು ಬಸವಕುಮಾರ ಸ್ವಾಮೀಜಿ 9449588669
ಬಸವ ಮಂಟಪ 080-23131476

ಚಂದಾ ಅವಧಿ ಮುಗಿದವರಿಗೆ ಸೂಚನೆ ಕಳಿಸಲಾಗುವುದು. ತಕ್ಷಣ ಹಣ ಕಳಿಸಿರಿ, ನವೀಕರಿಸಿರಿ.

ವಿ.ಸೂ: ಚಂದಾ ಕಳಿಸಲು ಅನುಕೂಲ ಇಲ್ಲದವರು ಫೋನ್ ಮೂಲಕ ಪತ್ರಿಕೆ ಕಳಿಸಲು ತಿಳಿಸಿರಿ. ಶರಣ ಮೇಳ (ಕಲ್ಯಾಣಪರ್ವ)ದಲ್ಲಿ ಚಂದಾ ಹಣವನ್ನು ಪ್ರಾಮಾಣಿಕವಾಗಿ ಕಟ್ಟಿರಿ.

ಮಾಹಿತಿಗಾಗಿ ಸಂಪರ್ಕಿಸಿ 9945806297

ಲಂಡನ್‌ವರೆಗೆ ತಲುಪಿದ ಬಸವ ಬೆಳಕು

ಅದರಿಂದ ಮನಸ್ಸಿಗೆ ಪರಮಾನಂದವೆನಿಸುತ್ತದೆ. ಮೆಟ್ಟಿಲ ಮೇಲೆ ನಿಂತು ನಾವು ಮೇಲೆ ಮತ್ತು ಕೆಳಗೆ ದೃಷ್ಟಿ ಹಾಯಿಸಿದಾಗ ಇರುವೆಗಳು ಸಾಲುಗಟ್ಟಿ ನಿಂತಿರುವಂತೆ ಶರಣ ಸ್ತೋಮ ನಿಂತಿರುವ ದೃಶ್ಯ ಕಣ್ಣಿಗೆ ಕಟ್ಟುವಂತಿರುತ್ತದೆ. ದೆಹಲಿಯ ಮೆಟ್ರೋಸ್ಟೇಷನ್‌ಗಳಲ್ಲಿ ಸ್ವಯಂಚಾಲಿತ ನಿಚ್ಚಣಿಕೆ (Escalator) ಮೇಲೆ ನಿಂತು ಜನರು ಕೆಳಗಿಳಿಯುವ ದೃಶ್ಯವನ್ನು ನೆನಪಿಸುತ್ತದೆ. ತಿರುಗಿ ನೋಡುವುದಕ್ಕೂ ಅವಕಾಶವಿಲ್ಲದಷ್ಟು ಜನಸಂದಣಿ ನಾವು ಮೆಟ್ಟಿಲುಗಳಿಂದ ಕೆಳಗೆ ಇಳಿಯುತ್ತಿದ್ದೇವೆಯೋ ಅಥವಾ ಮೇಲೆ ಹತ್ತುತ್ತಿರುವೆವೋ ಎಂಬ ಅನುಮಾನ ಮೂಡುತ್ತದೆ. 850 ವರ್ಷ ಕಳೆದರೂ ಲಕ್ಷಾಂತರ ಬಸವ ಭಕ್ತರು ಬಸವಣ್ಣನವರ ತತ್ವಕ್ಕಾಗಿ ದುಡಿಯಲು, ಮಡಿಯಲು ಈಗಲೂ ಸಿದ್ಧರಾಗಿದ್ದಾರೆ. ನಾವೆಲ್ಲ ಗುರು ಬಸವಣ್ಣನವರು ಬಿತ್ತಿದ ಬೀಜಗಳು. ಈ ಬೀಜಗಳಿಗೆ ಸಾವೆಂಬುದಿಲ್ಲ. 800 ವರ್ಷಗಳ ವರೆಗೆ ಜನಮಾನಸದಲ್ಲಿ ಅಂತರ್ಜಲವಾಗಿ, ಗುಪ್ತಗಾಮಿನಿಯಾಗಿ ಹರಿಯುತ್ತಿದ್ದ ಬಸವಭಕ್ತಿಯ ನೀರು ಪೂಜ್ಯ ಮಾತಾಜಿಯವರು ಹಾಕಿದ ಶರಣಮೇಳ ಎಂಬ ರಿಗ್ ಯಂತ್ರದಿಂದ ಆ ನೀರು ಮತ್ತೆ ಪುಟಿದೆದ್ದಿದೆ, ಮೇಲೆ ಮೇಲೆ ಚಿಮ್ಮುತ್ತಿದೆ.

ಬಸವನ ಬೆಳಕೆ ಎಲ್ಲಾಡಿ ಬಂದೆ
ಭಾರತವೆಲ್ಲ ಸುತ್ತಾಡಿ ಬಂದೆ ಎಂದು

ಕವಿ ಸಿದ್ದಯ್ಯಾ ಪುರಾಣಿಕರು ಹೇಳುವಂತೆ ಭಾರತದ ಸಂಸತ್ತಿನ ಮುಂದೆ ಲಂಡನ್ ಥೇಮ್ಸ ನದಿಯ ದಂಡೆಯ ವರೆಗೆ ಲಂಡನ್ ಸಂಸತ್ತಿನ ಒಳಗೆ ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಸಂಕಲ್ಪದಿಂದ ಬಸವಾತ್ಮಜೆಯ ಪರಿಶ್ರಮದಿಂದ ಬಸವನ ಬೆಳಕು ಎಲ್ಲೆಡೆಯಲ್ಲಿ ಪಸರಿಸಿದೆ. ಲಂಡನ್ ವರೆಗೆ ತಲುಪಿದೆ ಇದೆಲ್ಲಾ ಬಸವಾದಿ ಶರಣರ ಸಂಕಲ್ಪ.

ಬಸವಯೋಗಿ ಸಿದ್ಧರಾಮೇಶ್ವರರು

ಜಯಂತಿ ಜ.15
(ಮಕರ ಸಂಕ್ರಾಂತಿ ದಿನ)

| ಪುನೀತ್ ಎಂ.ಜಿ.



ವೈಜ್ಞಾನಿಕ ಕಾಯಕ ಸಿದ್ಧಾಂತ, ಶರಣ ಧರ್ಮವನ್ನು ಭಾರತದಲ್ಲಿ ಹಬ್ಬಿಸಿದ ಮಹಾನ್ ಚೇತನರಲ್ಲಿ ಶ್ರೀ ಶಿವಯೋಗಿ ಸಿದ್ಧರಾಮೇಶ್ವರರು ಪ್ರಮುಖರು. ಆದ್ದರಿಂದಲೇ ಅವರಿಗೆ ಕಾಯಕಯೋಗಿ ಎಂದು ಕರೆಯಲಾಗಿದೆ.

ಸಿದ್ಧರಾಮೇಶ್ವರರು ಹುಟ್ಟಿದ್ದು ಇಂದಿನ ಮಹಾರಾಷ್ಟ್ರದಲ್ಲಿನ ಸೊಲ್ಲಾಪುರದಲ್ಲಿ. ಕೃಷಿ ಕಾಯಕದ ದಂಪತಿಗಳಾದ ಕುಡುವಕ್ಕಲಿಗರ ಮುದ್ದುಗೌಡ ಹಾಗೂ ಸುಗ್ಗಲಾದೇವಿ ದಂಪತಿಗೆ ಇಳಿವಯಸ್ಸಿನಲ್ಲಿ ಸಂಕ್ರಾಂತಿಯ ದಿನದಂದು ಜನಿಸಿದರು. ಧೂಳಿಮಾಕಾಳ ಸಿದ್ಧರಾಮರ ಮೊದಲ ಹೆಸರು. ಆದರೆ ಮಗು ಹಾಲನ್ನು ಕುಡಿಯುವುದನ್ನು ಬಿಟ್ಟ ಕಾರಣ ರೇವಣಸಿದ್ದರ ಆದೇಶದಂತೆ ಸಿದ್ಧರಾಮ ಎಂದು ಮರು ನಾಮಕಾರಣ ಮಾಡಲಾಯಿತು.

ಗುರು ಸಿದ್ಧರಾಮರು ಪರಮ ಮೌನಿಗಳು, ಲೌಕಿಕ ಜೀವನದಲ್ಲಿ ಅನಾಸಕ್ತರು. ತಾಯಿತಂದೆಯರ ಮಗ ಸಿದ್ಧರಾಮನನ್ನು ದನ ಕಾಯಲು ತಮ್ಮ ಹೊಲಕ್ಕೆ ಕಳುಹಿಸತೊಡಗಿದರು. ಗಿಡವೊಂದರ ಶಿವಲಿಂಗವೊಂದನ್ನು ಇಟ್ಟು-ಕೊಂಡು ಪೂಜಿಸುತ್ತಾ ಸಿದ್ಧರಾಮರು ದಿನಗಳೆಯುತ್ತಿದ್ದರು.

ಒಂದು ದಿವಸ ಹೊಲದಲ್ಲಿ ಧ್ಯಾನಾಸಕ್ತರಾಗಿ ಕುಳಿತಿದ್ದಾಗ, ಓರ್ವ ಜಟಾಧಾರಿಯಾದ ಯೋಗಿಗಳು ಬಂದು ಸಿದ್ಧರಾಮರ ತಲೆ ನೇವರಿಸಿ, ನನ್ನ ಹೆಸರು ಮಲ್ಲಯ್ಯ ಎಂದು, ಇರುವುದು ಶ್ರೀಶೈಲದಲ್ಲಿ, ಹಸಿವಾಗಿದೆ ತಿನ್ನಲು ಮೊಸಂಬರಲಿ ಮಾಡಿಸಿಕೊಂಡು ಬರಲು ಹೇಳಿದರು. ಆಗ ಸಿದ್ಧರಾಮರು ಮನೆಗೆ ಹೋಗಿ ಮೊಸರಂಬಲಿ ಮಾಡಿಸಿಕೊಂಡು ಬಂದರು, ಆದರೆ ಯೋಗಿಗಳು ಹೊಲದಲ್ಲಿ ಇರಲಿಲ್ಲ. ಬಾಲಕ ಸಿದ್ಧರಾಮೇಶ್ವರರು ಅವರನ್ನು ಹುಡುಕಿ ಹತಾಶರಾದರು. ಅದೇ ಸಮಯಕ್ಕೆ ಶ್ರೀಶೈಲಕ್ಕೆ ಹೊರಟ ತಂಡವೊಂದು ಎದುರಾಯಿತು.

ಮಲ್ಲಯ್ಯ ಉಘೇ ಉಘೇ, ಎಂಬ ಪದ ಕೇಳಿ ಮುಗ್ಧ ಸಿದ್ಧರಾಮರು ಅವರ ಜತೆ ಶ್ರೀಶೈಲಕ್ಕೆ ಹೋದರು. ಅಲ್ಲಿ ಮಲ್ಲಯ್ಯ ಎಂದು ರೆಯುತ್ತಿದ್ದ ಸ್ಥಾವರಲಿಂಗ ನೋಡಿ ಬೇಸರಪಟ್ಟರು.


ಶ್ರೀಶೈಲದ ಅರಣ್ಯದಲ್ಲಿ ಮಲ್ಲಯ್ಯನನ್ನು ಹುಡುಕತೊಡಗಿದರು. ಸಿಗದೆ ಇದ್ದಾಗ ರುದ್ರಗಮ್ಮರಿಯ ತುದಿಯಿಂದ ಹಾರಲು ಯತ್ನಿಸಿದಾಗ ಮಲ್ಲಯ್ಯ ಯೋಗಿ ಪ್ರತ್ಯಕ್ಷವಾಗಿ ಸಿದ್ಧರಾಮರನ್ನು ಅವರ ಸನ್ನಿಧಿಗೆ ಕರೆದುಕೊಂಡು ಹೋಗಿ, ಸಾಧನಾ ಮಾರ್ಗದಲ್ಲಿದ್ದ ಸಿದ್ದರಾಮರನ್ನು ಎಚ್ಚರಿಸಿ, ಕರ್ತವ್ಯಪರನಾಗಲು ತಿಳಿಸಿದರು. ಸೊಲ್ಲಾಪುರದಲ್ಲಿ ಮಲ್ಲಿಕಾರ್ಜುನನ್ನು, ಅಲ್ಲೇ ಸ್ಥಾಪಿಸಿ ಲೋಕಹಿತ ಕಾರ್ಯಗಳನ್ನು ಮಾಡು ಎಂದು ಮರಳಿ ಕಳುಹಿಸಿದರು. ಅಂದಿನಿಂದ ಸಿದ್ಧರಾಮರು ಕರ್ಮಯೋಗಿಗಳಾದರು. ಕೆರೆ, ಬಾವಿ ದೇವಾಲಯ ಕಟ್ಟುತ್ತಾ ಅನ್ನದಾನ ಮಾಡಿಸತೊಡಗಿದರು. ಅವರ ಕೀರ್ತಿ ನಾಲ್ದೆಸೆಗೆ ಹಬ್ಬತೊಡಗಿತು.

ಒಮ್ಮೆ ಅಲ್ಲಮ ಪ್ರಭುಗಳು ಸೊಲ್ಲಾಪುರಕ್ಕೆ ಬಂದು ಕೆರೆಕಟ್ಟಿಸುತ್ತಿದ್ದ ಸಿದ್ಧರಾಮರಿಗೆ, ಕಲ್ಯಾಣದ ಬಸವಣ್ಣನವರ ಜನಪರಿವರ್ತನೆಯ ಕಾರ್ಯದ ಬಗ್ಗೆ ತಿಳಿಸಿದರು. ಕಲ್ಯಾಣಕ್ಕೆ ಅವರನ್ನು ಕರೆದುಕೊಂಡು ಬಂದು ಬಸವಣ್ಣನವರ ಸನ್ನಿಧಿಯಲ್ಲಿ, ಚಿನ್ಮಯಜ್ಞಾನಿ ಚೆನ್ನಬಸವಣ್ಣನವರಿಂದ ಇಷ್ಟಲಿಂಗ ದೀಕ್ಷೆ ಕೊಡಿಸಿದರು. ನಂತರ ಇಷ್ಟಲಿಂಗಧಾರಿ ಸಿದ್ಧರಾಮೇಶ್ವರರು ಸೊನ್ನಲಾಪುರಕ್ಕೆ ಹೋದರು. ಕೆಲವು ಸಮಯದ ನಂತರ ಕಲ್ಯಾಣದಲ್ಲಿ ಭಾರತದ ದೇಶದ ಇತಿಹಾಸದಲ್ಲಿ ಪ್ರಪ್ರಥಮವಾಗಿ ಶರಣ ಧರ್ಮಕ್ಕೆ ಕೀರ್ತಿಯ ಕಿರೀಟವನ್ನೇರಿಸಿದ ಸಮಗಾರ ಹರಳಯ್ಯನವರ ಮಗನಿಗೂ ಹಾಗು ಬ್ರಾಹ್ಮಣ ಮಧುವರಸರ ಮಗಳಿಗೂ ಅಂತರ್ ವರ್ಣೀಯ ವಿವಾಹವನ್ನು ಗುರು ಬಸವಣ್ಣನವರು ಮಾಡಿಸಿದಾಗ ಸಂಪ್ರಧಾಯವಾದಿಗಳು ಸಿಡಿದೆದ್ದರು. ಬಿಜ್ಜಳ ರಾಜನಿಗೆ ಪ್ರಚೋದನೆ ನೀಡಿ ಬಸವಣ್ಣನವರನ್ನು ಗಡಿಪಾರು ಮಾಡಿಸಲಾಯಿತು. ಹರಳಯ್ಯ, ಮಧುವರಸ ಮತ್ತು ಅವರ ಮಕ್ಕಳನ್ನು ಆನೆಯ ಕಾಲಿಗೆ ಕಟ್ಟಿ ಎಳೆಹೂಟೆ ಶಿಕ್ಷೆ ನೀಡಿ ವಧಿಸಲಾಯಿತು.

ಜಾತಿವಾದಿಗಳು ವಚನ ಸಾಹಿತ್ಯ ನಾಶಪಡಿಸುವ ತಂತ್ರ ಹೂಡಿದಾಗ ಚೆನ್ನಬಸವಣ್ಣನವರು, ಅಕ್ಕನಾಗಲಾಂಬಿಕೆ, ಮಡಿವಾಳ ಮಾಚಯ್ಯನವರು ವಚನ ಸಾಹಿತ್ಯ ರಕ್ಷಿಸುವ ಸಂಕಲ್ಪ ತೊಟ್ಟು, ಅದರೊಂದಿಗೆ ಎರಡು ತಂಡಗಳಾಗಿ ಹೊರಟರು. ಮಾಚಯ್ಯನವರ ನೇತೃತ್ವದಲ್ಲಿ ಒಂದು ತಂಡವು ಸಹ್ಯಾದ್ರಿಯತ್ತ ಹೋಯಿತು. ಚೆನ್ನಬಸವಣ್ಣನವರು, ಅಕ್ಕನಾಗಲಾಂಬಿಕೆ ತಂಡವು ಸಾಹಿತ್ಯದೊಡನೆ ಸೊಲ್ಲಾಪುರಕ್ಕೆ ಬಂದು ಸಿದ್ಧರಾಮೇಶ್ವರರಿಗೆ ವಿವರಿಸಿ, ಶೂನ್ಯ ಪೀಠದ ಮೂರನೆಯ ಅಧಿಕಾರಿಯನ್ನಾಗಿ ಅವರನ್ನೇ ಮಾಡಿ ಸಹ್ಯಾದ್ರಿಯತ್ತ ನಡೆದರು. ಆಗ ಸಿದ್ಧರಾಮೇಶ್ವರರು ಶರಣರಿಗೆ ಆಶ್ರಯ ನೀಡಿದರು. ಅಷ್ಟೇ ಅಲ್ಲದೆ ಶಿಷ್ಯೆ ರಾಣಿ ಚಾಮಲಾದೇವಿಗೆ ಆದೇಶ ನೀಡಿ ಶರಣರ ರಕ್ಷಣೆ ಕೂಡಾ ಮಾಡುತ್ತಾರೆ.

ಶಿವಯೋಗಿ ಸಿದ್ಧರಾಮೇಶ್ವರರು ವಚನ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ. ಅವರ ಸಾಹಿತ್ಯವು ತ್ರಿವಿಧಿ, ಮಿಶ್ರ ಸ್ತೋತ್ರ ತ್ರಿವಿಧಿ, ಅಷ್ಟಾವರಣ ತ್ರಿವಿಧಿಗಳು ಬರೆಯಲ್ಪಟ್ಟಿವೆ. ನಿರರ್ಗಳವಾಗಿ, ಅರ್ಥಪೂರ್ಣವಾಗಿ, ತಾಳ ಹಾಗೂ ಲಯಬದ್ಧವಾಗಿದೆ. ಮಹಾರಾಷ್ಟ್ರ ಪ್ರಾಂತ್ಯದಲ್ಲಿ ಶರಣ ಧರ್ಮ ಹಬ್ಬಬೇಕಾದರೆ ಮುಖ್ಯ ಕಾರಣ ಬಸವಯೋಗಿ ಸಿದ್ಧರಾಮೆಶ್ವರರು. ದಕ್ಷಿಣ ಕರ್ನಾಟಕದಲ್ಲೂ ಸಹ ಸಂಚರಿಸಿ ಧರ್ಮ ಜಾಗೃತಿ ಮಾಡಿದ್ದಾರೆ. ಬೆಂಗಳೂರು, ಮೈಸೂರು, ಚಿಕ್ಕಮಗಳೂರು, ತುಮಕೂರು, ಹಾಸನ, ವಿಜಯಪುರ (ಬಿಜಾಪುರ)ಇನ್ನಿತರ ಕಡೆ 873ಕ್ಕೂ ಹೆಚ್ಚು ಸ್ಥಳಗಳಲ್ಲಿ ಪೂಜೆ ಮಾಡಿ, ಗದ್ದುಗೆ ಸ್ಥಾಪಿಸಿದ್ದಾರೆ. ನಂತರ ಇಚ್ಛಾಮರಣಿಯಾದ ಅವರು ಸೊಲ್ಲಾಪುರದಲ್ಲೇ ಐಕ್ಯರಾಗುತ್ತಾರೆ.

http://edinadavachana.over-blog.com/ ನಲ್ಲಿ ಅವರ ವಚನಗಳನ್ನು ಸರಳ ವಿಶ್ಲೇಷಣೆಯೊಂದಿಗೆ ಓದಬಹುದು.



ದಯಾನಂದ ಸ್ವಾಮೀಜಿ

ಶೋಧವಾಗಲಿ ಮೂಲ ಅನುಭವ ಮಂಟಪ ಸ್ಥಳ

12ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಬಸವಕಲ್ಯಾಣದಲ್ಲಿ ಪ್ರಜಾಪ್ರಭುತ್ವದ ಪರಿಕಲ್ಪನೆಯ ಹಿನ್ನಲೆಯಲ್ಲಿ ಸಂಸತ್ (**Parliament**) ಮಾದರಿಯಲ್ಲಿ ಸಂಸ್ಥಾಪಿಸಿದ್ದ ಅನುಭವ ಮಂಟಪದ ಮೂಲ ಸ್ಥಳ ಈಗ ಎಲ್ಲಿದೆ? ಯಾವ ಸ್ವರೂಪದಲ್ಲಿದೆ? ಯಾರ ವಶದಲ್ಲಿದೆ ?.............................

ಎಂಬುದನ್ನು ಶೋಧಿಸಿ, ಸರ್ಕಾರ ಅದನ್ನು ತನ್ನ ವಶಕ್ಕೆ ತೆಗೆದುಕೊಂಡು, ಆ ಮೂಲ ಸ್ಥಳದಲ್ಲಿಯೇ ಅನುಭವ ಮಂಟಪವನ್ನು ಪುನರ್ ನಿರ್ಮಿಸಬೇಕು.

ಅಲ್ಲಿ 12 ನೇಯ ಶತಮಾನದಲ್ಲಿ ನಡೆದ ರೀತಿಯಲ್ಲಿ ಸಕಲ ಜೀವಾತ್ಮರಿಗೆ ಲೇಸು ಬಯಸುವ, ಆಧ್ಯಾತ್ಮ ಮತ್ತು ವಿಜ್ಞಾನಗಳ ಸಹಯೋಗದಲ್ಲಿ ಸರ್ವೋದಯದ ವಿಶ್ವಮಾನವ ಸಮಾಜ ರಚನೆಯಲ್ಲಿ ಪ್ರಧಾನ ಪಾತ್ರ ನಿರ್ವಹಿಸುವ ಚಿಂತನಾ ಪ್ರಕ್ರಿಯೆಗಳು ಯಾವುದೇ ತಾರತಮ್ಯಗಳಿಲ್ಲದೆ ವರ್ಷವಿಡೀ ನಡೆಯುವಂತಾಗಬೇಕು.

ಸುಮಾರು 850 ವರ್ಷಗಳಾಗುತ್ತಾ ಬಂದರೂ ಬಸವಣ್ಣನವರು, ಅಲ್ಲಮಪ್ರಭು ದೇವಾ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಸಿದ್ಧರಾಮೇಶ್ವರ ಮುಂತಾದ 770 ಅಮರಗಣಂಗಳು, ಸಾವಿರಾರು ಶರಣರು ಯಾವ ಸ್ಥಳದಲ್ಲಿ ಎಲ್ಲರೂ ಕೂಡಿ ಅನುಭವಗೋಷ್ಠಿ ನಡೆಸುತ್ತಿದ್ದರೋ, ಎಲ್ಲಿ ಜಗತ್ತಿನ ಸರ್ವಮಾನವರ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವವನ್ನು, ಮಾನವ ಹಕ್ಕುಗಳನ್ನು, ಸರ್ವಜೀವಿಸಂಕುಲದ ಬದುಕುವ ಹಕ್ಕನ್ನು ಘೋಷಿಸಲಾಯಿತೋ, ಎಲ್ಲಿ ವಿಶ್ವಧರ್ಮವೊಂದರ ಉದಯ ವಾಯಿತೊ, ಎಲ್ಲಿ ಅಪೂರ್ವವಾದ ವಚನ ವಾಂಗಮಯದ ಅಮೃತಧಾರೆ ಉಕ್ಕಿ ಹರಿದು. ಕನ್ನಡ ಸಾಹಿತ್ಯಕ್ಕೆ ವಿಶ್ವ ಸಾಹಿತ್ಯದ ಸ್ಥಾನ ತಂದು ಕೊಟ್ಟಿತೋ, ಯಾವುದು ವಿಶ್ವದ ಪ್ರಪ್ರಥಮ ಸಂಸತ್ (Parliament) ಆಗಿತ್ತೋ ಅಂತಹ ವಿಶ್ವವಿನೂತನವಾದ ಅನುಭವ ಮಂಟಪದ ಮೂಲ ಸ್ಥಳ ಶೋಧನೆಗೆ ಸರ್ಕಾರಗಳು ಮುಂದಾಗದೇ ಇಲ್ಲಿಯುವರೆಗೂ ಮೌನವಾಗಿರುವದು ಅತ್ಯಂತ ವಿಷಾದಕರ ಸಂಗತಿಯಾಗಿದೆ.

ಬ್ರಿಟನ್ ಪಾರ್ಲಿಮೆಂಟ್ ಎದುರು ಬಸವಣ್ಣನವರ ಪುತ್ಥಳಿ ಸ್ಥಾಪಿಸಿ ಭಾರತದ ಪ್ರಧಾನ ಮಂತ್ರಿ ನರೇಂದ್ರಮೋದಿಯುವರಿಂದ ಅನಾವರಣಗೊಳಿಸಿ, ವಿಶ್ವದಲ್ಲಿಯೇ ಪ್ರಪ್ರಥಮವಾಗಿ ಪ್ರಜಾಸತ್ತಾತ್ಮಕವಾದ 'ಅನುಭವ ಮಂಟಪ'ವೆಂಬ ಸಂಸತ್ತನ್ನು ಸಂಸ್ಥಾಪಿಸುವುದರ ಮೂಲಕ "ಪಾರ್ಲಿಮೆಂಟಿನ ಜನಕ ಎಂಬ ಹೆಗ್ಗಳಿಕೆಗೆ ಬಸವಣ್ಣನವರು ಪಾತ್ರರಾಗಿದ್ದಾರೆ". ಎಂದು ವಿಶ್ವದೆಲ್ಲೆಡೆ ಪ್ರಚಾರ ಮಾಡಲಾಗುತ್ತಿದೆ. ಆದರೆ ಬಸವಕಲ್ಯಾಣದ ಮೂಲ ಅನುಭವ ಮಂಟಪ ಎಲ್ಲಿತ್ತು ಎಂಬುದನ್ನು ಪತ್ತೆ ಹಚ್ಚುವಗೋಜಿಗೆ ಹೋಗದೆ, ಕರ್ನಾಟಕ ಮತ್ತು ಭಾರತ ಸರ್ಕಾರಗಳು ತಮಗೇನೂ ಸಂಬಂಧವಿಲ್ಲದಂತೆ ವರ್ತಿಸುತ್ತಿವೆ. ಇದು ಈ ನಾಡಿನ ಅತ್ಯಂತ ದುರ್ದೈವ.

ಕರ್ನಾಟಕ ಸರ್ಕಾರ 'ಬಸವ ಕಲ್ಯಾಣದಲ್ಲಿರುವ ಬಸವಾದಿ ಶರಣ ಶರಣೇಯರ ಸ್ಮಾರಕಗಳನ್ನು ಗುರುತಿಸಿ, ನವೀಕರಿಸಿ, ಸಂರಕ್ಷಿಸಿಲೆಂದೇ 'ಬಸವಕಲ್ಯಾಣದ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿದೆ. ಆದರೆ ಈ ಪ್ರಾಧಿಕಾರ ಬಸವಕಲ್ಯಾಣದ ಹೃದಯುವಾದ 'ಮೂಲ ಅನುಭವ ಮಂಟಪದ ಬಗ್ಗೆ ಚಕಾರವೆತ್ತದಿರುವುದು ಅನೇಕ ಸಂಶಯಗಳಿಗೆ ಕಾರಣವಾಗಿದೆ. ಮರ್ತ್ಯಲೋಕದ ಮಹಾಮನೆ ಹಾಳಾಗಬಾರದು, ಜಗದ ಹಿತಾರ್ಥ ವಾಗಬೇಕೆಂದು ಸಾರಿದ, ಸಮಪಾಲು; ಸಮಬಾಳು ಎಂಬ ಸಮತಾವಾದ ಘೋಷಿಸಿದ, ಇವನಾರವ ಎನಿಸಿದೆ ಇವನಮ್ಮವನೆಂದು ಇಡೀ ವಿಶ್ವವನ್ನೇ ಅಪ್ಪಿಕೊಂಡ ಈ ಮೂಲ ಅನುಭವ ಮಂಟಪ ಇಡೀ ವಿಶ್ವದ ಸೊತ್ತು. ಶತಾಯ-ಗತಾಯ ನಿರ್ಮಾಣಗೊಳ್ಳಲೇಬೇಕು. ಉತ್ಖಲನದ ಮೂಲಕ ಸಾವಿರಾದು ವರ್ಷಗಳ ಹಿಂದಿನ ಹರಪ್ಪ-ಮೆಹೆಂಜೊದಾರೋ ಸಂಸ್ಕೃತಿಯನ್ನು ಹಾಗೂ ರಾಮಾಜನ್ಮ ಭೂಮಿಯ ಸ್ಥಳವನ್ನು ಪತ್ತೆ ಹಚ್ಚಿದ ಇತಿಹಾಸ ತಜ್ಞರಿಗೆ, ಪ್ರಾಚ್ಯವಸ್ತು ಇಲಾಖೆಯ ಪರಿಣಿತರಿಗೆ ಎಂಟೂವರೆ ಶತಮಾನದ ಅನುಭವ ಮಂಟಪದ ಮೂಲನೆಲೆ ಶೋಧಿಸುವುದು ಕಷ್ಟವೇನಲ್ಲ. ಆದರೆ ಸರ್ಕಾರ ತನ್ನ ಇಚ್ಚಾಶಕ್ತಿ ತೋರಬೇಕಷ್ಟೆ.












ಶರಣಮೇಳದ
ಸಿರಿ ಕ್ಷಣಗಳು
ಶರಣಮೇಳದ
ಸಿರಿ ಕ್ಷಣಗಳು





ಶರಣಮೇಳದ ಸಿಹಿ ಕ್ಷಣಗಳು



ಸಂಪ್ರದಾಯಕ್ಕಿಂತ ಸತ್ಯ ಶ್ರೇಷ್ಠ... ಸತ್ಯಕ್ಕಿಂತ ಕಲ್ಯಾಣ ಶ್ರೇಷ್ಠ...?



ವಚನವಾಣಿ

ಮಾತೆ ಕಸ್ತೂರಿದೇವಿ

ಏನಿದು?! ಈ ಲೇಖನದ ಶಿರೋನಾಮೆಯ ಘೋಷವಾಕ್ಯಗಳನ್ನು ಎಲ್ಲೋ ಕೇಳಿದಂತಿದೆ ಯಲ್ಲ....ಎಲ್ಲಿರಬಹುದು?...ಎಂದು ಮನದಾಳದಲ್ಲಿ ಅಡಗಿರುವ ನೆನಪನ್ನು ಕೆದಕಿ ನೋಡುತ್ತಿದ್ದಿರಾ! ನಿಜಕ್ಕೂ ನಿಮ್ಮ ಹುಡುಕಾಟ ಸ್ತುತ್ಯಾರ್ಹ. ಶರಣ ಬಂಧುಗಳೆ, ಧಾರ್ಮಿಕ, ಆದ್ಯಾತ್ಮಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಅಥವ ವ್ಯಾವಹಾರಿಕ ಹೀಗೆ ಯಾವ ಕ್ಷೇತ್ರವಾದರೂ ಇರಲಿ ಸಂಬಂಧಪಟ್ಟವರು ಧ್ಯೇಯೋದ್ದೇಶಗಳನ್ನು ಸಿದ್ದಪಡಿಸಿ ಒಂದು ದೇಶ ಕಟ್ಟುವಾಗ, ಸಂಸ್ಥೆಯನ್ನು ಹುಟ್ಟು ಹಾಕುವಾಗ ಅಥವ ವಸ್ತುವನ್ನು ತಯಾರು ಮಾಡಿ ಮಾರುಕಟ್ಟೆಗೆ ಬಿಡುಗಡೆ ಮಾಡುವಾಗ ತಮ್ಮ ದೇಶ, ಸಂಸ್ಥೆ, ವಸ್ತುವನ್ನು ಪ್ರತಿನಿಧಿಸುವ ಒಂದು ವಿಶಿಷ್ಟವಾದ ವಾಣಿಜ್ಯ ಸೂಚಕ ಚಿಹ್ನೆ(Trade Mark) ಅಥವ ಲಾಂಛನ (Emblem) ವನ್ನು ಇಟ್ಟುಕೊಳ್ಳುತ್ತಾರೆ. ಮುಂದೆ ಈ ಚಿಹ್ನೆಯ ಮೂಲಕವೇ ಸಂಸ್ಥೆಯ ವ್ಯವಹಾರಗಳು ಗುರುತಿಸಲ್ಪಡುತ್ತವೆ ಮತ್ತು ನೋಂದಣಿಯಾಗುತ್ತದೆ. ಲಾಂಛನದ ವ್ಯಾಖ್ಯಾನವನ್ನು



ಹೀಗೆ ಕೊಡಲಾಗುತ್ತದೆ "ಲಾಂಛನವು ಒಂದು ಸಾಮ್ರಾಜ್ಯವನ್ನು, ವ್ಯಕ್ತಿಯನ್ನೊ, ಅಥವ ಸಂಸ್ಥೆಯನ್ನೊ ಪ್ರತಿನಿಧಿಸುವ ಅಮೂರ್ತ ಅಥವ ಮೂರ್ತ ಚಿತ್ರಕಲಾ ಕೃತಿಯಾಗಿದೆ" ಎಂದು. ಹೀಗೆ ಅಂಗೀಕಾರವಾದ ಲಾಂಛನವನ್ನು ಬೇರೆಯವರು ಬಳಸುವಂತಿಲ್ಲ. ಯಾವುದೇ ಮಠಮಾನ್ಯ, ದೇಶ, ಸಂಸ್ಥೆಗಳನ್ನು ನೋಡಿ, ಅವೆಲ್ಲ ತಮ್ಮದೇ ಆದ ಲಾಂಛನದೊಂದಿಗೆ ಗುರುತಿಸಲ್ಪಡುತ್ತವೆ. ಉದಾಹರಣೆಗೆ ನಮ್ಮ ಭಾರತದೇಶದ ಲಾಂಛನದ ಬಗ್ಗೆ ಹೇಳುವುದಾದರೆ ಅಶೋಕಸ್ತಂಭದಲ್ಲಿರುವ ನಾಲ್ಕು ಮುಖಗಳ ಸಿಂಹ-ಚಿಹ್ನೆಯಲ್ಲಿ ಮೂರು ಸಿಂಹದ ಮುಖ ಮಾತ್ರ ಕಾಣುತ್ತಿದ್ದು ಹಿಂಬದಿಯಲ್ಲಿ ಒಂದು ಮುಖವಿದೆ. ನಿಂತಿರುವ ಸಿಂಹದ ಕಾಲಿನ ಕೆಳಗಿನ ಜಾಗದಲ್ಲಿ ಧರ್ಮಚಕ್ರದ ಚಿತ್ರದೊಂದಿಗೆ ಓಡುತ್ತಿರುವ ಹಸು, ಎತ್ತು, ಆನೆ, ಕುದುರೆ, ಸಿಂಹಗಳನ್ನು ಕೆತ್ತಲಾಗಿದೆ. ಅಲ್ಲದೆ ಮುಂಡಕೋಪನಿಷತ್ತಿನಲ್ಲಿ ಬರುವ ಸತ್ಯಮೇವ ಜಯತೆ ಎಂಬ ಘೋಷ ವಾಕ್ಯವನ್ನು ದೇವನಾಗರಿ ಲಿಪಿಯಲ್ಲಿ ಬರೆಸಲಾಗಿದೆ.

ಅದರಂತೆ ಪೂಜ್ಯದ್ವಯರಾದ ವಾಙ್ಮಯ ತಪಸ್ವಿಗಳೆನಿಸಿದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರು ಮತ್ತು ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುಗಳೆನಿಸಿದ ಮಾತೆ ಮಹಾದೇವಿತಾಯಿಯವರು 1976 ರಲ್ಲಿ ಬೆಂಗಳೂರಿನ ರಾಜಾಜಿನಗರದಲ್ಲಿ ವಿಶ್ವಕಲ್ಯಾಣ ಮಿಷನ್ ಎಂಬ ಧರ್ಮಪ್ರಚಾರ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಗಾಗಿ ರೂಪಿಸಿದ ಹಣತೆಯ ಲಾಂಛನ ಚಿತ್ರ ತನ್ನ ಸುತ್ತ ಪ್ರಕಾಶಿಸುತ್ತಿರುವ ಪ್ರಭಾವಳಿಯಲ್ಲಿ ಸಂಪ್ರದಾಯಕ್ಕಿಂತ ಸತ್ಯ ಶ್ರೇಷ್ಠ – ಸತ್ಯಕ್ಕಿಂತ ಕಲ್ಯಾಣ ಶ್ರೇಷ್ಠ ಎಂಬ ಅರ್ಥಗರ್ಭಿತ ಘೋಷ ವಾಕ್ಯವನ್ನು ಬಿಂಬಿಸಿದರು.

ಈ ಲಾಂಛನ ಬೆಳಕಿಗೆ ಬಂದಿದ್ದೆ ತಡ ಜನಮಾನಸದಲ್ಲಿ ಗೊಂದಲದ ಅಲೆಯೊಂದಿಗೆ ವಿರೋಧವೂ ವ್ಯಕ್ತವಾಯಿತು. ಅಂದರೆ ಇಲ್ಲಿ ಪೂಜ್ಯ ಮಾತಾಜಿಯವರಾಗಲಿ, ಅಪ್ಪಾಜಿಯವರಾಗಲಿ ಏನೇ ಮಾಡಿದರೂ ವಿರೋಧಿಸಬೇಕೆಂಬ ಪೂರ್ವಾಗ್ರಹ ಪೀಡಿತ ಮನೋಭಾವ ಬಹಳಕಾಲದಿಂದಲೂ ಇದೇ ಎಂದಾಯಿತು.

ಜನರಿಗೆ ಮೊದಲ ಅರ್ಧ ವಾಕ್ಯದಲ್ಲಿ ಯಾವ ಸಂದೇಹವಾಗಲಿ ಗೊಂದಲವಾಗಲಿ ಹುಟ್ಟಲಿಲ್ಲ, ಸಂಪ್ರದಾಯಕ್ಕಿಂತ ಸತ್ಯ ಶ್ರೇಷ್ಠ ಎಂದರೆ ಯಾರಿಗೂ ಈ ಬಗ್ಗೆ ತಕರಾರಿಲ್ಲ. ಕಾರಣ ಸತ್ಯದ ಬಲದಿಂದ ಸಂಪ್ರದಾಯದ ಕಪಿಮುಷ್ಟಿಯಿಂದ ಬಿಡುಗಡೆ ಹೊಂದಲು ಸಾಕಷ್ಟು ಜನ ತವಕಿಸುತ್ತಿರುವುದು ಎಂದು ಭಾವಿಸಲಡ್ಡಿಯಿಲ್ಲ. ಇಲ್ಲಿಯಾದರು ಅಷ್ಟೇ ಸಂಪ್ರದಾಯ ಎಂದರೆ ಹೀಗೆ ಅರ್ಥೈಸಬಹುದು. ಸಂಪ್ರದಾಯವೆಂದರೆ ಮೂಢರೂಢಿಯ ಆಚರಣೆಗಳು ಮತ್ತು ಪರಂಪರೆ. ಜಾತಿ ವ್ಯವಸ್ಥೆ, ಬಹುದೇವತೋಪಾಸನೆ, ಪಂಚಾಂಗ ನೋಡುವ ಮುಂತಾದ ವಿಕೃತ ಸಂಪ್ರದಾಯದ ಚೌಕಟ್ಟಿನೊಳಗೆ ನಲುಗುವುದಕ್ಕಿಂತ ಸತ್ಯದ ಬಲದಿಂದ ಹೊರಬಂದು ಬದುಕನ್ನು ರೂಪಿಸಿಕೊಳ್ಳುವ ಪ್ರಯತ್ನವನ್ನು ಪ್ರಜ್ಞಾವಂತರೆಲ್ಲರೂ ಒಪ್ಪುತ್ತಾರೆ ಎಂಬುದರಲ್ಲಿ ಸಂದೇಹ ಉಳಿಯುವುದಿಲ್ಲ. ಆದ್ದರಿಂದ ಸಂಪ್ರದಾಯಕ್ಕಿಂತ ಸತ್ಯ ಶ್ರೇಷ್ಠ ಎಂಬ ಮಾತಿಗೆ ತಲೆಬಾಗಬೇಕು.

ಆದರೆ ಎರಡನೆಯ ವಾಕ್ಯ ಮಾತ್ರ ಹಾಗಲ್ಲ. ಸತ್ಯಕ್ಕಿಂತ ಕಲ್ಯಾಣ ಶ್ರೇಷ್ಠ- ಇದು ಒಂದು ರೀತಿ ದಿಗ್ಭ್ರಮೆ ಹುಟ್ಟಿಸುವ ಮಾತು. ಸುಳ್ಳಿಗೆ ಪ್ರಾಧಾನ್ಯತೆ ಕೊಟ್ಟಂತೆ ಮೇಲ್ನೋಟಕ್ಕೆ ಗೋಚರವಾಗುತ್ತಿದೆ.

ಈ ಎಲ್ಲಾ ಗೊಂದಲಕ್ಕೆ ಪೂಜ್ಯ ಮಾತಾಜಿಯವರು ತಮ್ಮ ಸ್ಪಷ್ಟೀಕರಣವನ್ನು ಡಿಸೆಂಬರ್-1977 ರ ಕಲ್ಯಾಣ ಕಿರಣ ಮಾಸಪತ್ರಿಕೆಯ ಮಾತೃಹರಕೆ ಅಂಕಣದಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ" ಸತ್ಯವು ಒಂದು ತೀಕ್ಷ್ಣವಾದ ಅಲಗು; ಅದನ್ನು ಬಳಸುವಾಗ ಎಚ್ಚರ ಮತ್ತು ವಿವೇಕ ಅತಿ ಅವಶ್ಯ. ಇಲ್ಲವಾದರೆ ನಾವು ಬಯಸುವ ಹಿತ ಸತ್ಯದಿಂದ ದೂರವಾಗಿ ವ್ಯತಿರಿಕ್ತ ಪರಿಣಾಮ ಬೀರಬಹುದು. ಈ ಉಕ್ತಿಯಲ್ಲಿ ಕಲ್ಯಾಣ ಎಂಬ ಪದ-ಕ್ಕೆ ಮದುವೆ ಎಂಬ ಸಾಮಾನ್ಯ ಅರ್ಥ ಇಟ್ಟಿಲ್ಲ. ನೂರು ಸುಳ್ಳು ಹೇಳಿ ಮದುವೆ ಮಾಡು ಎಂಬ ಅರ್ಥರಹಿತ ಬುದ್ಧಿವಾದ ಇಲ್ಲಿಲ್ಲ. ಅದು ಈಗ ಸವಕಲು ನಾಣ್ಯ. ಏಕೆಂದರೆ ಹಿಂದಿನ ಕಾಲದಲ್ಲಿ ಹೇಗಾದರೂ ಸುಳ್ಳು ಹೇಳಿಯೋ, ಮೋಸಮಾಡಿಯೋ ಗಂಡ-ಹೆಂಡತಿ ಮಾಡಿಬಿಟ್ಟರೆ ತಪ್ಪಿಸಿಕೊಳ್ಳಲಾರದ ಬಾಂಧವ್ಯ ಒದಗುತ್ತಿತ್ತು. ಪಾರಾಗಲೂ ಈರ್ವರಿಗೂ ಅಸಾಧ್ಯ, ಹೊಂದಿಕೊಂಡು ಬಾಳುವುದಷ್ಟೇ ಮುಂದಿನ ಮಾರ್ಗವಾಗುತ್ತಿತ್ತು. ಈಗ ಆ ನಿಯತ್ತಾಗಲಿ ಅಥವಾ ಒತ್ತಡವಾಗಲಿ ಇಲ್ಲ. ಸತ್ಯವು ಬಯಲಿಗೆ ಬಂದನಂತರ ಸುಲಭವಾಗಿ ಒಬ್ಬರನೊಬ್ಬರು ತೊರೆಯಬಲ್ಲರು. ಅದರಿಂದ ಲಗ್ನಕ್ಕೆ ವ್ಯಯಿಸಿದ ಹಣ ಹಾಳು. ಹೆಣ್ಣಿಗೆ ಅದೇ ಸಹಾಯಧನವಾಗಿಟ್ಟರೆ ಆಕೆಯನ್ನು ಸಂರಕ್ಷಿಸುವ ಕೆಲಸವನ್ನಾದರೂ ಮಾಡೀತು."

ಇದಿಷ್ಟು ಸತ್ಯದ ಮಾತಾಯಿತು. ಇನ್ನು ಕಲ್ಯಾಣದ ಬಗ್ಗೆ ಪೂಜ್ಯ ಮಾತಾಜಿಯವರ ವ್ಯಾಖ್ಯಾನವನ್ನು ಈಗ ನೋಡೋಣ. "ಕಲ್ಯಾಣ ಎಂದರೆ ಹಿತ-ಒಳ್ಳಿತು(Welfare), ಶಿವ (Divinity) ಎಂಬರ್ಥದಲ್ಲಿ ಈ ಮೇಲ್ಕಂಡ ಉಕ್ತಿಯಲ್ಲಿ ಬಳಸಲಾಗಿದೆ. ಸತ್ಯದಿಂದ ಒಳ್ಳೆಯದೆ ಆಗುತ್ತದೆ. ಸತ್ಯವೆ ಜಯಿಸುತ್ತದೆ. ಜಯಿಸಲೇ ಬೇಕು. ಮಾವಿನ ಬೀಜ ಬಿತ್ತಿ ಬೇವನ್ನು ಹೇಗೆ ನಿರೀಕ್ಷಿಸುವುದಿಲ್ಲವೋ ಹಾಗೆ ಸತ್ಯದ ಬೀಜ ಬಿತ್ತಿದವನು ಅಕಲ್ಯಾಣದ ಫಲವನ್ನು ನಿರೀಕ್ಷಿಸಲಾರ; ಅದು ಬರಲಾರದು. ಆದರೆ ಕೆಲವೊಮ್ಮೆ ಸತ್ಯವು ತಾತ್ಕಾಲಿಕ ಕೆಡುಕನ್ನು ಉಂಟುಮಾಡುತ್ತಿದ್ದರೆ? ಅಂಥ ವಿಶೇಷ ಪ್ರಸಂಗದಲ್ಲಿ ಮಾರ್ಗದರ್ಶನಕ್ಕೆ ಇನ್ನೊಂದು ದಾರಿ ಬೇಕು. ಹಿಂದಿನ ಕಾಲದಲ್ಲಿ ಶತೃಗಳು ಮುತ್ತಿಗೆ ಹಾಕಿದಾಗ ದುರ್ಗಗಳಿಂದ ಹೊರವಲಯಕ್ಕೆ ಪಾರಾಗಲು ರಹಸ್ಯ ಸುರಕ್ಷಿತ ದಾರಿಗಳಿರುತ್ತಿದ್ದವು. ಆದ್ದರಿಂದ 'ಸತ್ಯಕ್ಕಿಂತ ಕಲ್ಯಾಣ ಶ್ರೇಷ್ಠ' ಎಂಬುದು Generalised statement ಸಾಮಾನ್ಯೀಕರಣ ಮಾಡುವ ಉಕ್ತಿಯಲ್ಲ; ಬಹಳ ಎಚ್ಚರಿಕೆಯಿಂದ ವಿಶೇಷ ಪ್ರಸಂಗಗಳಲ್ಲಿ ಪ್ರಯೋಗಿಸಬೇಕಾದ Exceptional statement. ವಿಶೇಷಾಸ್ತ್ರಗಳನ್ನು ಸಮರದಲ್ಲಿ ಬಳಸುವ ಸಮರ್ಥ ಯೋಧನಂತೆ ಮೈಯೆಲ್ಲ ಜಾಗ್ರತರಿರಬೇಕು-ಈ ಉಕ್ತಿಯನ್ನು ಆಚರಣೆಗೆ ತರುವಾಗ, ಇದಕ್ಕೆ ಒಂದು ಉದಾಹರಣೆ ಕೊಡೋಣ:

ಕವಲು ದಾರಿಯ ಕೂಟದಲ್ಲಿ ಓರ್ವ ಕುಳಿತಿರುವನು. ಅಬಲೆಯಾದ ಮಹಿಳೆ ಓಡೋಡುತ್ತಾ ಬರುವಳು. ಈ ಸಜ್ಜನನನ್ನು ನೋಡಿ ತನ್ನನ್ನು ದುಷ್ಟನೋರ್ವ ಬೆನ್ನು ಹತ್ತಿರುವನೆಂದು, ಅವನಿಗೆ ದಾರಿ ತಪ್ಪಿಸಬೇಕೆಂದು ವಿನಂತಿಸಿ ಮುಂದೆ ಸಾಗುವಳು. ಆಗ ದುಷ್ಟ ಬಂದಾಗ ಈ ವ್ಯಕ್ತಿ ಸತ್ಯಹರಿಶ್ಚಂದ್ರನ ಮೊಮ್ಮಗ ತಾನೆಂದು ಅಬಲೆಯು ಹೋದ ದಾರಿ ತೋರಬೇಕೋ ಅಥವ ವಿರುದ್ಧ ದಿಕ್ಕು ತೋರಿಸಿ ಆಕೆಯನ್ನು ಸಂರಕ್ಷಿಸಬೇಕೋ ? ಇಂಥಲ್ಲಿ ಸತ್ಯಸಂಧತೆ ಕಲ್ಯಾಣಗಳ ಮಧ್ಯೆ ಸ್ಪರ್ಧೆ ಏರ್ಪಡದಿರದೆ? ಇಲ್ಲಿ ಅವನು ಕೊಂಚ ಸುಳ್ಳು ಹೇಳಿ, ವ್ಯಕ್ತಿಗತ ಪಾಪಕ್ಕೆ ಬಲಿಯಾದರೂ ಚಿಂತೆಯಿಲ್ಲ, ಸಾಮೂಹಿಕ ಕಲ್ಯಾಣಕ್ಕೆ ದಾರಿ ತೋರಲಿಲ್ಲವೆ?"

ಹೀಗೆ ಪೂಜ್ಯ ಮಾತಾಜಿಯವರು ತಾವು ರಚಿಸಿರುವ ಲಾಂಛನದ ಬಗ್ಗೆ ಬಹು ವಿಸ್ತಾರವಾಗಿ ವಿವರಣೆ ಕೊಡುತ್ತಾರೆ. ವಚನಗಳ ಪ್ರಕಾರ ಈ ಸಂಪ್ರದಾಯ, ಸತ್ಯ ಮತ್ತು ಕಲ್ಯಾಣದ ಪರಿಕಲ್ಪನೆಗಳು ತಮ್ಮವೆ ಆದ ಛಾಪನ್ನು ಮೂಡಿಸುತ್ತವೆ, ಪ್ರಭಾವ ಬೀರುತ್ತವೆ. ಅಂತೆಯೇ ಚಿನ್ಮಯ ಜ್ಞಾನಿ ಚನ್ನಬಸವಣ್ಣನವರು ತಮ್ಮ ವಚನವೊಂದರಲ್ಲಿ ಸಂಪ್ರದಾಯವನ್ನು ಕುರಿತು ಹೇಳುತ್ತಿದ್ದಾರೆ

**ಅನಿಮಿಷಂಗೆ ಲಿಂಗವ ಕೊಟ್ಟಾತ ಬಸವಣ್ಣ.
ಆ ಲಿಂಗ ನಿನಗೆ ಸೇರಿತ್ತಾಗಿ, ಬಸವಣ್ಣನ
ಸಂಪ್ರದಾಯದ ಕಂದನು ನೋಡಾ ನೀನು.
ಭಕ್ತಿದಳದುಳದಿಂದ ಚೆನ್ನಸಂಗಮನಾಥನೆಂಬ
ಲಿಂಗವನವಗ್ರಹಿಸಿಕೊಂಡೆನಾಗಿ ಬಸವಣ್ಣನ
ಸಂಪ್ರದಾಯದ ಕಂದನು ನೋಡಾ ನಾನು.
ಇಂತಿಬ್ಬರಿಗೆಯೂ ಒಂದೆ ಕುಲಸ್ಥಲವಾದ
ಕಾರಣ, ಕೂಡಲಚೆನ್ನಸಂಗಯ್ಯನಲ್ಲಿ
ಮಹಾಮನೆಯ ಪ್ರಸಾದ
ಇಬ್ಬರಿಗೆಯೂ ಒಂದೆ ಕಾಣಾ ಪ್ರಭುವೆ.**

ಸಮಗ್ರ ವಚನ ಸಂಪುಟ-3

ಅಪ್ರತಿಮ ಯೋಗಿಗಳಾದ ಅನಿಮಿಷರು ಗುರು ಬಸವಣ್ಣನವರಿಂದ ತಾವು ಮಾಡಿದ ಪುಣ್ಯ ವಿಶೇಷದಿಂದ ಲಿಂಗದೀಕ್ಷೆಯನ್ನು ಪಡೆದು ದೃಷ್ಟಿಯೋಗದಲ್ಲಿ ತನ್ಮಯರಾಗಿದ್ದಾಗ ವೈರಾಗ್ಯ ಚಕ್ರವರ್ತಿಯೆಂದು ಪ್ರಸಿದ್ಧರಾದ, ಪರ್ಯಟನದಲ್ಲಿದ್ದ ಅಲ್ಲಮಪ್ರಭುದೇವರು ಮೌನಿಯಾಗಿದ್ದ ಅನಿಮಿಷಯೋಗಿಗಳಿಂದ ತಾವೇ ಭಕ್ತಿಪ್ರೇರಿತರಾಗಿ ಗುರುಹಸ್ತದಲ್ಲಿದ್ದ ಲಿಂಗವನ್ನು ಪಡೆದು ಆ ಕ್ಷಣದಲ್ಲಿ ಪ್ರಾಪ್ತವಾದ ಲಿಂಗಾನುಭಾವದಿಂದ ಆನಂದತುಂದಿಲರಾದ ಅಪೂರ್ವ ಘಟನೆ ಅಲ್ಲಮಪ್ರಭುದೇವರ ಪವಿತ್ರ ಜೀವನದಲ್ಲಿ ನಡೆದಿರುವುದು ವಚನಾಧಾರಿತವಾಗಿದೆ. ಈ ಕಾರಣಕ್ಕಾಗಿಯೇ ಚೆನ್ನಬಸವಣ್ಣನವರು ಅನಿಮಿಷಂಗೆ ಲಿಂಗವ ಕೊಟ್ಟಾತ ಬಸವಣ್ಣ, ಆ ಲಿಂಗ ನಿನಗೆ ಸೇರಿತ್ತಾಗಿ, ಎಂದು ಘೋಷಿಸಿರುವುದು. ಹೀಗಾಗಿ ಅಲ್ಲಮಪ್ರಭುದೇವರು ಬಸವ ಸಂಪ್ರದಾಯ(ಸಂತತಿ)ದವರಾದರು. ನಾನು ಸಹ ಗುರು ಬಸವಣ್ಣನವರಿಂದಲೇ ದೀಕ್ಷಿತನಾದುದರಿಂದ ನಾವಿಬ್ಬರು ಬಸವ ಸಂಪ್ರದಾಯಕ್ಕೆ ಸೇರಿದವರಾದೆವು. ಇದರಿಂದ ನಾವು ಬಸವ ಮಹಾಮನೆಯ ಮಕ್ಕಳಾದ ಕಾರಣ ನಮಗೆ ಬಸವ ಮಹಾಮನೆಯ ಪ್ರಸಾದವೂ ಒಂದೆಯಾಗಿದೆ. ಅಂದರೆ ಇಲ್ಲಿ ಚೆನ್ನಬಸವಣ್ಣನವರು ಬಸವ ಸಂಪ್ರದಾಯದಲ್ಲಿ ಸಲ್ಲಲು ಮುಖ್ಯವಾಗಿ ಬೇಕಾದುದು ಭಕ್ತಿ-ಅದರಲ್ಲೂ ಜಗನ್ನಿಯಾಮಕನಾದ ಪರಮಾತ್ಮನಲ್ಲಿ ಸದ್ಭಕ್ತಿಯಿರಬೇಕು. ಅವನನ್ನು ಬಸವಪ್ರಣೀತ ಇಷ್ಟಲಿಂಗರೂಪದಲ್ಲಿ ಶ್ರದ್ಧಾನಿಷ್ಠೆಯಿಂದ ಪೂಜಿಸಬೇಕು. ಈ ಎರಡು ಅರ್ಹತೆಗಳಿದ್ದಲ್ಲಿ ಮಾತ್ರ ಯಾರು ಬೇಕಾದರೂ ಗುರು ಬಸವ ಸಂಪ್ರದಾಯಕ್ಕೆ ಸೇರುತ್ತಾರೆ ಎಂಬ ಧ್ವನಿ ಈ ವಚನದಲ್ಲಿ ವ್ಯಕ್ತವಾಗಿದೆ ಎಂಬ ಭಾವ ಸ್ಫುರಿಸುತ್ತಿದೆ. ಇದಲ್ಲದೆ ಇತರ ಯಾವುದೇ ಆಚಾರ-ವಿಚಾರಗಳು ಬಸವ ಸಂಪ್ರದಾಯಕ್ಕೆ ಹೊರತಾದವು. ಪ್ರಭುದೇವರು ಮತ್ತೊಂದು ವಚನದಲ್ಲಿ ಈ ಮಾತನ್ನು ಹೀಗೆ ಪುಷ್ಟೀಕರಿಸುತ್ತಾರೆ 'ಇವಾವನೂ ಹೊದ್ದದೆ ಭಕ್ತಿಭಿಕ್ಷವನುಂಬವರೆಲ್ಲ ನಿಮ್ಮ ಸಂಪ್ರದಾಯ ಕಾಣಾ ಗುಹೇಶ್ವರಾ'- ಹೀಗಾಗಿ ಇಲ್ಲಿ ಸಂಪ್ರದಾಯ ಅಂದರೆ ಗೊಡ್ಡು ಸಂಪ್ರದಾಯಕ್ಕಿಂತ ಸತ್ಯ ಶ್ರೇಷ್ಠ ಆಗುವುದಿಲ್ಲವೆ?.

ಈಗ ಜಗನ್ಮಾತಾ ಅಕ್ಕ ಮಹಾದೇವಿಯವರನ್ನು ಕೇಳೋಣ.

**ಸತ್ಯ ಸದ್ಭಕ್ತರ ಸಂಭಾಷಣೆ
ನುಡಿಗಡಣವೆಂಬುದು ನಿಚ್ಚಲೊಂದು
ಉಪದೇಶ ಮಂತ್ರವ ಕಲಿತಂತೆ. ಬಚ್ಚಬರಿಯ
ಭವಿಗಳ ಸಂಗದಲ್ಲಿದ್ದರೆ ಕಿಚ್ಚಿನೊಳಗೆ ಬಿದ್ದ
ಕೀಡೆಯಂತಪ್ಪುದಯ್ಯ ಸುಚಿತ್ತದಿಂದ ನಿಮ್ಮ
ಸದ್ಭಕ್ತರ ಸಂಗದಲ್ಲಿರಿಸದಿರ್ದಡೆ ನಾನಿನ್ನೆತ್ತ
ಸಾರುವೆನು ಹೇಳಾ ಚೆನ್ನಮಲ್ಲಿಕಾರ್ಜುನಾ
ದೇವರ ದೇವಾ ?**

-ಜಗನ್ಮಾತಾ ಅಕ್ಕಮಹಾದೇವಿ.

ನಡೆನುಡಿಯಲ್ಲಿ ಸತ್ಯಶುದ್ಧಿಯನ್ನು ಅಳವಡಿಸಿಕೊಂಡಿರುವ ಶರಣರೊಡನೆ ಆಡುವ ಒಂದೊಂದು ಮಾತು ವಚನ ಸಂಭಾಷಣೆಗಳು ಪ್ರತಿಕ್ಷಣವೂ ಬದುಕಿನಲ್ಲಿ ಚೈತನ್ಯ ತುಂಬುವ ಮಂತ್ರದಂತೆ ಕೆಲಸ ಮಾಡುತ್ತವೆ. ಶರಣರು ತಮ್ಮ ಹೃದಯದಾಳದಿಂದ ಬರೆದ ತತ್ವನಿಷ್ಠ ನೀತಿ ಬೋಧಕ ವಚನಗಳು ಮಾಂತ್ರಿಕರಂತೆ ಅನಕ್ಷರಸ್ಥರಲ್ಲೂ ಸಚ್ಚಿಂತನೆಯ ಕಲೆ, ಸ್ಪಷ್ಟ ಓದು ಶುದ್ಧ ಬರಹವನ್ನು ಕಲಿಸುತ್ತವೆ ಮಾತ್ರವಲ್ಲ ಸದೃಢ ವ್ಯಕ್ತಿತ್ವ ನಿಕಾಸಕ್ಕೆ

ದಾರಿಯಾಗುತ್ತದೆ. ಇದರ ಬದಲಿಗೆ ಸದ್ಭಕ್ತರಾದವರು ಅಥವ ಅಧ್ಯಾತ್ಮ ಸಾಧಕರು ಬಚ್ಚಬರಿಯ ಲೌಕಿಕರಾದ ಭವಿಗಳ ಸಂಗದಲ್ಲಿದ್ದರೆ ಬೆಂಕಿಯೊಳಗೆ ಕೀಡೆ ಬಿದ್ದು ಬೆಂದು, ಸುಟ್ಟು ಬೂದಿಯಾದಂತೆ ಜೀವನ ವ್ಯರ್ಥವಾಗುತ್ತದೆ ಎಂದು ಭವಿ- ಭಕ್ತರ ಸಂಗದ ಗಣನೀಯ ವ್ಯತ್ಯಾಸವನ್ನು ಅಕ್ಕ ಮಹಾದೇವಿಯವರು ಇಲ್ಲಿ ಮನಗಾಣಿಸುತ್ತಿದ್ದಾರೆ. ಶರಣರ ಸಂಗದಲ್ಲಿರಲು ಸಾಧಕನಿಗೆ ಒಳ್ಳೆಯ ಮನಸ್ಸು ಮತ್ತು ಸದ್ಬುದ್ಧಿ ಇರಬೇಕು. ಇವಿಲ್ಲದವರು ಶರಣರ ಸಂಗದಲ್ಲಿರಲು ಸಾಧ್ಯವಿಲ್ಲ. ಆದ್ದರಿಂದ ಪರಮಾತ್ಮನು ಇಂಥ ಸುಮನ ಸದ್ಬುದ್ಧಿಯನ್ನು ಕರುಣಿಸಿ ಸತ್ಯನಿಷ್ಠರಾದ ಶರಣರ ಸಂಗದಲ್ಲಿ ಇರಿಸದಿದ್ದಡೆ ನಾನು ಎಲ್ಲಿಗೆ ಹೋಗುತ್ತಿದ್ದೇನೋ?! ಎಂದು ಪರಮಾತ್ಮನ ಅನುಪಮವಾದ ಕರುಣೆಯನ್ನು ಕೊಂಡಾಡುತ್ತಿದ್ದಾರೆ.

ಅಂತೆಯೇ ಇಂದು ಎಲ್ಲೆಡೆಯೂ ಬಸವ ಮಂಟಪಗಳು ಸ್ಥಾಪನೆಯಾಗಿ ಗುರು ಬಸವಪೂಜೆ, ವಾರಕ್ಕೊಮ್ಮೆ ಸೇರುವ ಶರಣಸಂಗಮದಲ್ಲಿ ಸಾಮೂಹಿಕ ಪ್ರಾರ್ಥನೆ, ಪ್ರವಚನಗಳು ಮತ್ತು ಅಚ್ಚುಕಟ್ಟಾದ ಪ್ರಸಾದದ ವ್ಯವಸ್ಥೆ-ಹೀಗೆ ನಿರಂತರವಾಗಿ ಜರುಗಿ ಅಕ್ಕನ ಮಾತನ್ನು ಸತ್ಯವಾಗಿಸಿ, ಅನುಭವಕ್ಕೆ ಬಂದಿರುವುದರಲ್ಲಿ ಸಂದೇಹವಿಲ್ಲ.

ಈಗ ಕಲ್ಯಾಣದ ಸಾಮಾಜಿಕ, ಧಾರ್ಮಿಕ, ನೈತಿಕ, ರಾಜಕೀಯ ಮತ್ತು ಆಧ್ಯಾತ್ಮಿಕ ಮೌಲ್ಯಗಳ ವೈಭವವನ್ನು ತೋರಿಸಲು ನಾವು ಮತ್ತೆ ವ್ಯೋಮಕಾಯ ಸಿದ್ಧ ಅಲ್ಲಮಪ್ರಭುದೇವರನ್ನೆ ಕೇಳಬೇಕು.....ಅವರು ತಮ್ಮ ವಚನದಲ್ಲಿ ಕಲ್ಯಾಣ ಮತ್ತು ಅದರ ಶ್ರೇಯಸ್ಸಿಗೆ ಕಾರಣ ಕರ್ತರಾದವರನ್ನು ಹೀಗೆ ಕೊಂಡಾಡುತ್ತಿದ್ದಾರೆ.

**ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ
ತೈಲವನೆರೆದು, ಆಚಾರವೆಂಬ ಬತ್ತಿಯಲ್ಲಿ
ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿದ್ದಿತಯ್ಯಾ ಶಿವನ ಪ್ರಕಾಶ !
ಆ ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯ**

ಅಸಂಖ್ಯಾತ ಭಕ್ತಗಣಂಗಳು. ಶಿವಭಕ್ತರಿರ್ದ ಕ್ಷೇತ್ರವೆ ಅವಿಮುಕ್ತಕ್ಷೇತ್ರವೆಂಬುದು ಹುಸಿಯೆ ? ಶಿವಭಕ್ತರಿರ್ದ ದೇಶ ಪಾವನವೆಂಬುದು ಹುಸಿಯೆ ಗುಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನಬಸವಣ್ಣನ ಕಂಡು ಬದುಕಿದೆನು ಕಾಣಾ ಸಿದ್ಧರಾಮಯ್ಯಾ.

-ಅಲ್ಲಮಪ್ರಭುದೇವರು,

ಗುರು ಬಸವಣ್ಣನವರು ಇದ್ದ ಕಲ್ಯಾಣ ಪಟ್ಟಣವೇ ಒಂದು ಹಣತೆಯಾಗಿ, ಆ ಹಣತೆಯಲ್ಲಿ ಜಗತ್ಕರ್ತ ಪರಮಾತ್ಮನ ಭಕ್ತಿಯೇ ಎಣ್ಣೆಯಾಯಿತು. ಸದಾಚಾರ ಎಂಬುದೇ ಬತ್ತಿಯಾಗಿ ಅದನ್ನು ಬಸವಣ್ಣ ಎಂಬ ಜ್ಯೋತಿಯು ಮುಟ್ಟಲು ಅಲ್ಲಿ ಮಂಗಲಮಯವಾದ ದೈವಿಪ್ರಕಾಶವೂ ಬೆಳಗತೊಡಗಿತು. ಆ ಬೆಳಕಿನಲ್ಲಿ ತಮ್ಮ ಬಾಳಿನ ಹಣತೆಗಳನ್ನು ಹೊತ್ತಿಸಿಕೊಳ್ಳಲು ಅಸಂಖ್ಯಾತ ಮುಮುಕ್ಷುಗಳು, ಸಾಧಕರು, ಯೋಗಿಗಳು, ಸಿದ್ಧಪುರುಷರು ಜಗತ್ತಿನ ನಾನಾ ಮೂಲೆಗಳಿಂದ ಧಾವಿಸಿ ಬಂದರು. ಹೀಗಾಗಿ ಕಲ್ಯಾಣದ ತುಂಬೆಲ್ಲ ಲೆಕ್ಕವಿಲ್ಲದಷ್ಟು ಶರಣರು ಕೂಡಿದರು. ಇಂಥ ಮಹಾನುಭಾವರಿಂದ ತುಂಬಿ ತುಳುಕುತ್ತಿರುವ ಕಲ್ಯಾಣವು ಅವಿಮುಕ್ತ ಕ್ಷೇತ್ರವಾಗಿ ಕಂಗೊಳಿಸುತ್ತಿತ್ತು. ಇಂಥ ಅಪೂರ್ವವಾದ ಪವಾಡ ಸದೃಢವಾದ ಜಾತಿ, ವರ್ಣ,ವರ್ಗರಹಿತ-ಧರ್ಮಸಹಿತವಾದ ಕಲ್ಯಾಣ ರಾಜ್ಯ ನಿರ್ಮಾಣದ ಕರ್ತೃಗಳಾದ ಪರಮಾರಾಧ್ಯ ಗುರು ಬಸವಣ್ಣನವರಿಂದ ನಾನು ಪ್ರಭಾವಿತನಾದ್ದರಿಂದ ಬದುಕಿನ ಸತ್ಯ ಗೋಚರವಾಗಿ ಬದುಕನ್ನು ಕಂಡುಕೊಂಡೆನು ಎಂದು ತುಂಬು ಹೃದಯದಿಂದ ಧನ್ಯತಾಭಾವವನ್ನು ಬಸವಯೋಗಿ ಸಿದ್ದರಾಮೇಶ್ವರರ ಮುಂದೆ ವ್ಯಕ್ತಪಡಿಸುತ್ತಿದ್ದಾರೆ.

ಶರಣರ ಸಂಕಲ್ಪದಂತೆ ಪೂಜ್ಯ ಮಾತಾಜಿಯವರು ಬಸವಕಲ್ಯಾಣದಲ್ಲಿ ಬಸವ ಧರ್ಮ ಪೀಠದ ಹೆಸರಿನಲ್ಲಿ ಮಠ ಕಟ್ಟಿ ಮತ್ತೆ ಅಲ್ಲಮಪ್ರಭು ಶೂನ್ಯ ಪೀಠವನ್ನು ಸ್ಥಾಪಿಸಿ 12 ನೇ ಶತಮಾನದ ಕಲ್ಯಾಣದ ವೈಭವ ಮರುಕಳಿಸುವಂತೆ ಕಲ್ಯಾಣ ಪರ್ವದಂಥ ಗಣಪರ್ವಗಳನ್ನು ಯಶಸ್ವಿಯಾಗಿ ಮಾಡುತ್ತಿರುವುದು ಸಾಮಾನ್ಯ ಮಾತಲ್ಲ. ಇವರು ಆಡಿದಂತೆ ನಡೆದು ತೋರಿಸಿದ್ದಾರೆ ಎಂಬುದಕ್ಕೆ ಈಗಿನ ಬಸವ ಕಲ್ಯಾಣದ ಅಭಿವೃದ್ಧಿಯೇ ಸಾಕ್ಷಿ.

ಶುಭ ನುಡಿ

ನಡೆನುಡಿಯಲ್ಲಿ ಸತ್ಯಶುದ್ಧಿಯನ್ನು ಅಳವಡಿಸಿಕೊಂಡಿರುವ ಶರಣರೊಡನೆ ಆಡುವ ಒಂದೊಂದು ಮಾತು ವಚನ ಸಂಭಾಷಣೆಗಳು ಪ್ರತಿಕ್ಷಣವೂ ಬದುಕಿನಲ್ಲಿ ಚೈತನ್ಯ ತುಂಬುವ ಮಂತ್ರದಂತೆ ಕೆಲಸ ಮಾಡುತ್ತವೆ.

ಇನ್ನು ವಿಶ್ವ ಕಲ್ಯಾಣ ಮಿಷನ್ನಿನ ಸೋದರ ಸಂಸ್ಥೆಗಳಾದ ಬಸವ ಧರ್ಮ ಪೀಠ ಮತ್ತು ರಾಷ್ಟ್ರೀಯ ಬಸವ ದಳದ ಲಾಂಛನದ ಬಗ್ಗೆ ಬರೆಯದಿದ್ದರೆ ಲೇಖನ ಅಪೂರ್ಣವಾಗುತ್ತದೆ ಎಂಬ ಅಳುಕಿನಿಂದಾಗಿ ಈ ವಿಷಯವನ್ನು ಪ್ರಸ್ತಾಪಿಸುತ್ತೇನೆ. ನೀವು ಬಸವ ಧರ್ಮ ಪೀಠದ ಲಾಂಛನವನ್ನು ಎಂದಾದರು ಗಮನಿಸಿದ್ದೀರಾ?

ಇಲ್ಲಿ ಸಕಲ ಜೀವಾತ್ಮರಿಗೆ ಲೇಸು ಬಯಸುವವನೆ ಶರಣ ಎಂಬ ಗುರು ಬಸವ ವಾಣಿಯೊಂದಿಗೆ ಈ ಲಾಂಛನ ರಾರಾಜಿಸುತ್ತಿದೆ. ಅಂದರೆ ಇವನಾರವ ಎನ್ನದೆ ಇವ ನಮ್ಮವ ಎಂದು ಎಲ್ಲರನ್ನು ಇಂಬಿಟ್ಟುಕೊಂಡು ಲೇಸನ್ನು ಬಯಸುವ ವಿಶಾಲ ಮನೋಭಾವವನ್ನು ಬಿಂಬಿಸುತ್ತಿದೆ. ಅಂತೆಯೇ ಬಸವ ಧರ್ಮ ಪೀಠದ ಮಾರ್ಗದರ್ಶನದಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳು ಜಾತಿಮತಪಂಥಭೇದವಿಲ್ಲದೆ ಎಲ್ಲರನ್ನು ಆಕರ್ಷಿಸುತ್ತಿದ್ದು ಶರಣ ಮೇಳದಂಥ ಮಹಾಮೇಳಗಳಲ್ಲಿ ಲಕ್ಷಾಂತರ ಜನರು ನೆತ್ತಿಯ ಪ್ರಸಾದದೊಂದಿಗೆ ಜ್ಞಾನಪ್ರಸಾದವನ್ನು ಪಡೆದು ಪುನೀತರಾಗುತ್ತಿದ್ದಾರೆ. ಪೂಜ್ಯ ಶ್ರೀ


ಪುಟ 13ರಲ್ಲಿ ಮುಂದುವರೆಯುವುದು...

ವಿಚಾರ ಶೂನ್ಯರಾದ ಮೂಢನಂಬಿಕೆಯ ಪರವಾದಿಗಳು



✠ಪೂಜ್ಯಶ್ರೀ
ಬಸವಪ್ರಭು ಸ್ವಾಮೀಜಿ.

ಇತಿಹಾಸವನ್ನು ತತ್ವಜ್ಞಾನದಿಂದ, ವಿಜ್ಞಾನದಿಂದ, ಜ್ಞಾನದ ಬಲದಿಂದ ಹೇಗಾದರೂ ತಿಳಿದುಕೊಳ್ಳಬಹುದು. ಆದರೆ ಕ್ರಿಯಾಜ್ಞಾನವಿರಲಾರದ ಶಾಸ್ತ್ರ, ಪುರಾಣ, ಉಪನಿಷತ್ ಗ್ರಂಥಗಳು, ವೇದಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವ ಅಪವಾದಕ್ಕೆ ಗುರಿಯಾಗಿ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುತ್ತಿವೆಯೇ ಎಂಬ ಪ್ರಶ್ನೆ ಅದರ ವಾರಸುದಾರರಾದ ಹಿಂದೂ ಶಾಸ್ತ್ರಜ್ಞರ ಬಾಲಿಶತನದ ಹೇಳಿಕೆಯಿಂದ ದೃಢಪಡಿಸಿಕೊಳ್ಳುತ್ತಲಿವೆ. ಇದಕ್ಕೆ ಕಾರಣ ಸಮಾಜ ಸ್ವಾಸ್ಥ್ಯವನ್ನು ಅಂದಗೆಡಿಸುವ, ಕೋಮುದಳ್ಳುರಿಯನ್ನು ಜೀವಂತವಿಡುವ ಕೂಪ ಮಂಡೂಕದಂತಹ ಕೆಲವರು, ತಮ್ಮ ಮೂಗಿನ ನೇರಕ್ಕೆ ಎಲ್ಲವನ್ನು ಅಳೆಯುವ ಬುದ್ಧಿ ಚಾಪಲ್ಯವನ್ನು ಇತ್ತೀಚಿನ ದಿನಗಳಲ್ಲಿ ತಮ್ಮ ಲೇಖನಗಳಿಂದ ಎತ್ತಿ ತೋರಿಸುವ ಭೂಪರು ನಮ್ಮ ದೇಶದಲ್ಲಿ ಹೆಜ್ಜೆ ಹೆಜ್ಜೆಗೂ ಕಾಣಸಿಗುತ್ತಾರೆ.



ಕೆಲವರಿಗೆ ವಿಶ್ವಗುರು ಬಸವಣ್ಣನವರ ಸಮಾನತೆಯ ತತ್ವಗಳು ಮತ್ತು ಅವರ ಅನುಯಾಯಿಗಳನ್ನು ಕಂಡರೆ ಆಗದು. ಇರಲಿ, ಅವರ ವಿಚಾರ ಸರಣಿಯನ್ನು ಒಂದೊಂದಾಗಿ ನೋಡೋಣ ಹಿಂದುತ್ವದ ಬಗ್ಗೆ ಮಾತನಾಡಿದ ಅವರು ಹಿಂದೂ ಯಾರೂ? ಎಂಬುದನ್ನು ಮೊದಲು ಅರ್ಥೈಸಿಕೊಳ್ಳಬೇಕು.

ಹಿಂದನೆಯದಾಗಿ: ಹಿಂದು ಎನ್ನುವ ಪದವು ಹರಪ್ಪಾ-ಮಹೊಂಜೋದಾರೊ ನಾಗರೀಕತೆಯ ಸಿಂಧು ಪ್ರದೇಶದಲ್ಲಿ ವಾಸಮಾಡುತ್ತಿರುವವರಿಗೆಲ್ಲಾ ಸಿಂದೂಗಳೆಂದು ಅದು ಬರುಬರುತ್ತಾ ದ್ರಾವಿಡ ಭಾಷೆಯಲ್ಲಿ 'ಸ'ಕಾರ 'ಹ'ಕಾರವಾಗಿ ಬದಲಾಗಿ ಹಿಂದುವಾಯಿತೆಂದೂ ಹೇಳಲಾಗಿದೆ. ಅಂದರೆ ಸಿಂದೂ ನಾಗರೀಕತೆ ಜನಾಂಗವೆ, ಭಾರತದಲ್ಲಿ ವಾಸ ಮಾಡುತ್ತಿರುವವರು ಎಂಬುದನ್ನು ಸ್ವಾಮಿ ವಿವೇಕಾನಂದರು ಒಂದು ಕಡೆ ಪ್ರಸ್ತಾಪಿಸಿದ್ದಾರೆ.

ವಿಶಾಲತೆ ಮತ್ತು ಭಾರತಿಯತೆಯ ಬೆಳವಣಿಗೆಯ ದೃಷ್ಟಿಕೋನವನ್ನಿಟ್ಟುಕೊಂಡರೆ, ಇಲ್ಲಿ ಹುಟ್ಟಿರುವ ಧರ್ಮ, ಮತ, ಪಂಥ, ಪಂಗಡದವರೆಲ್ಲರು ಹಿಂದೂ ಕಕ್ಷೆಯಲ್ಲಿ ಬರುವಂತವರು ಹಾಗಾದರೆ ಹಿಂದೂ ಎನ್ನುವುದು ಧರ್ಮವಾಗಿರದೆ, ಅದು ಜನಾಂಗವಾಚಕದ ಪರಿಭಾಷೆಯಾಗಿದೆ ಎಂಬುದು ಸುಸ್ಪಷ್ಟ.

ಬಸವಾನುಯಾಯಿಗಳು ತಾವು ಹಿಂದುಗಳಲ್ಲವೆಂಬುವುದಕ್ಕೆ ಪ್ರಬಲ ಕಾರಣವಿದೆ. ಕಳೆದ ಎರಡು ದಶಕಗಳವರೆಗೂ ಅಖಂಡ ಭಾರತದಲ್ಲಿ ಹುಟ್ಟಿರುವ ಧರ್ಮಗಳೆಲ್ಲವು ಹಿಂದು ಕಕ್ಷೆಯಿಂದ ಹೊರತಾಗಿಲ್ಲ ಎಂಬುವುದನ್ನು ಒಪ್ಪಿದ್ದರು. ಆದರೆ ವೇದವನ್ನು ಒಪ್ಪುವವರು, ಭಗವದ್ಗೀತೆ ಒಪ್ಪುವವರು, ಜನಿವಾರ ಧರಿಸುವವರು ಮೂವತ್ಮೂರು ಕೋಟಿ ದೇವತೆಗಳನ್ನು ನಂಬುವವರು ಹಿಂದೂಗಳು ಎಂಬ ವ್ಯಾಖ್ಯಾನಗಳು ಯಾವಾಗ ಹುಟ್ಟಿಕೊಂಡವೋ ಮತ್ತು ಹಿಂದೂ ಎಂಬ ವಿಶಾಲತೆಯ ಪದದ ಅರ್ಥಕ್ಕೆ ವೇದ, ಶಾಸ್ತ್ರ, ಆಗಮ ಎಂಬ ಗ್ರಂಥಗಳ ತಳುಕು ಹಾಕಿ, ಹಿಂದೂ ಧರ್ಮವೆಂದು ಸಂಕುಚಿತಗೊಳಿಸಿಕೊಂಡರೋ ಆಗ ಕೆಲ ವಿಚಾರವಾದಿಗಳು, ಹಿಂದುಳಿದ ವರ್ಗಗಳವರು ಇದರಲ್ಲಿಯೆ ಇದ್ದು ಪರಿವರ್ತನೆ ಮಾಡಲು, ಮತ್ತು ಸಂಸ್ಕಾರ ಪಡೆಯಲು ಬಯಸಿದರು. ಅದು ಸಾಧ್ಯವಾಗದೇ ಹೋದಾಗ ಈ ಗ್ರಂಥದ ಕಟ್ಟು-ಪಾಡುಗಳಾದ: ಶ್ರೇಣಿಕೃತ ಜಾತಿ ವ್ಯವಸ್ಥೆ ಮತ್ತು ಹೆಣ್ಣಿಗೆ ಸ್ಥಾನಮಾನವೇ ನಿಷಿದ್ಧ ಎಂಬ ಧಾರ್ಮಿಕ ಅಸ್ವಾತಂತ್ರದ ಹರಾಜಕತೆ, ಗುಲಾಮಗಿರಿತನವನ್ನು ಮನಗಂಡು ತಮಗಾಗಿ ಅಲ್ಲಿ ಧಾರ್ಮಿಕ ಸ್ವಾತಂತ್ರ್ಯ, ಸ್ವಾಭಿಮಾನ ಬದುಕು ಇಲ್ಲದಿರುವುದು. ಇಂತಹವುಗಳ ವಿರುದ್ಧ ಧಾರ್ಮಿಕ ಕಹಳೆಯನ್ನೂದಿದ ಧಾರ್ಮಿಕ ನೇತಾರರ ಆದರ್ಶ ತತ್ವಗಳಿಗೆ ಮತ್ತು ಸಮಾನತೆಯ ಸ್ವಾತಂತ್ರಕ್ಕೆ ಮಾರುಹೋಗಿ ಅವರು ಕೊಟ್ಟುಹೋದ ಧರ್ಮಗಳಿಗೆ ಅನಿವಾರ್ಯವಾಗಿ ಸೇರ್ಪಡೆಯಾದರು, ತಾವು ಹಿದುಗಳಲ್ಲ ಎಂದು ನಿರ್ಧಾಕ್ಷಿಣ್ಯವಾಗಿ ಹೇಳಲು ತೊಡಗಿದರು.

ಇದರ ಹಿನ್ನಲೆಯನ್ನು ನೋಡುವುದಾದರೆ, ಈ ದೇಶದ ಕೆಲವು ಬುದ್ಧಿ ಜೀವಿಗಳು ಎಂದೇ ಹಿಂದು ಸಂಸ್ಕೃತಿಯಲ್ಲಿರುವ ತಾರತಮ್ಯಗಳು, ಮೂಢನಂಬಿಕೆಗಳು, ಅನಿಷ್ಟ ಪದ್ಧತಿಗಳನ್ನು ಧಿಕ್ಕರಿಸಿ, ಹೊಸದೊಂದು ಮಾರ್ಗವನ್ನು ಕಂಡುಹಿಡಿದು ಕ್ರಿಯಾಪ್ರಧಾನ ಜ್ಞಾನ ಹೊಂದಿರುವ ಧರ್ಮಗಳನ್ನು ಕೊಟ್ಟಿರುವುದು ಗಮನಿಸಬಹುದು. ಉದಾ: ಬೌದ್ಧ, ಜೈನ್, ಸಿಖ್, ಲಿಂಗಾಯತ ಧರ್ಮಗಳು. ಅದರಲ್ಲಿ ಹನ್ನೆರಡನೆ ಶತಮಾನದ ಲಿಂಗಾಯತ ಧರ್ಮ ಸಂಸ್ಥಾಪಕ ವಿಶ್ವಗುರು ಬಸವಣ್ಣನವರೂ ಒಬ್ಬರಾಗಿದ್ದಾರೆ. ಅವರಿಗೆ ಉಪನಿಷತ್, ವೇದ, ಆಗಮ, ಛಂಧಸ್ಸು, ಪುರಾಣ, ಭರತ, ಗಣಿತ, ವ್ಯಾಕರಣ ಇವೆಲ್ಲವುಗಳ ಜ್ಞಾನವಿತ್ತು. ಆದರೆ ಇಲ್ಲಿ ಕ್ರಿಯಾತ್ಮಕ ಆಚರಣೆಗಳು ಇರಲಾರದ್ದು ಅವರಿಗೆ ವಿರೋಧವಾಗಿ ಕಂಡಿತು. ಅದಕ್ಕಾಗಿಯೇ ಗುರು ಬಸವಣ್ಣನವರು ತಮ್ಮೊಂದು ವಚನದಲ್ಲಿ ಹೀಗೆ ಹೇಳುತ್ತಾರೆ. “ಏನಯ್ಯಾ ವಿಪ್ರರು ನುಡಿದಂತೆ ನಡೆಯರು, ತಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆ” ಎಂದು ಟೀಕಿಸಿದ್ದಾರೆ.

ಎರಡನೆಯದಾಗಿ: ಶ್ರೀಯುತ ಆಚಾರ್ಯರು ತಮ್ಮ ಲೇಖನದಲ್ಲಿ ಗುರು ಬಸವಣ್ಣನವರ ವಚನಗಳನ್ನು ಅಲ್ಲೊಂದು ಇಲ್ಲೊಂದು ‘ಊಟಕ್ಕೆ ಉಪ್ಪಿನಕಾಯಿ’ ತರಹ ಬಳಸಿಕೊಂಡು ವಿನಯತೆ ಬಗ್ಗೆ ಮಾತ್ರ ತಮಗೆ ಹೇಗೆ ಬೇಕೋ ಹಾಗೆ ವಿಶ್ಲೇಷಿಸಿದ್ದಾರೆ, ಆದರೆ ಗುರು ಬಸವಣ್ಣನವರ, ಧಾರ್ಮಿಕ ಸ್ವಾತಂತ್ರತೆ, ಸಾಮಾಜಿಕ ಸಮಾನತೆಯ ಸ್ವಾತಂತ್ರ್ಯದ ಹೊರಾಟವನ್ನು ತಿಳಿಸುವ ವಚನಗಳ ಮತ್ತೊಂದು ಮಗ್ಗುಲನ್ನು ಅರ್ಥ ಮಾಡಿಕೊಂಡಂತಿಲ್ಲ.

ಹೆಣ್ಣು-ಗಂಡಿನ ಪ್ರಾಕೃತಿಕ(ನೈಸರ್ಗಿಕ) ವಿಷಯಗಳೇ ಬೇರೆ, ಆದರೆ ಧಾರ್ಮಿಕ ಸ್ಥಾನಮಾನಗಳಲ್ಲಿ ಏಕೆ ಮಡಿ ಮೈಲಿಗೆಗಳನ್ನು ಮುಂದು ಮಾಡಿ ಸ್ತ್ರೀಯನ್ನು, ಶೋಷಿತರನ್ನು, ದಲಿತರನ್ನು ಧರ್ಮಕದ ಹೆಸರಿನಲ್ಲಿ ವಂಚಿಸುತ್ತಿರುವುದು ಮಾನವಕುಲಕ್ಕೆ ಅಪಚಾರವೇ ಸರಿ. ಆದ್ದರಿಂದಲೇ ಬಸವಣ್ಣನವರ ಅನೇಕ ವಚನಗಳು ನಮ್ಮನ್ನು ಆಕರ್ಷಣೆ ಮಾಡುತ್ತಿರುವುದರಿಂದ ಪ್ರಾಕೃತಿಕವಾಗಿಯೆ ವೈದಿಕಕ್ಕೆ ಸವಲಾಗಿದ್ದಾರೆ.

**ಹೊಲೆಗಂಡಲ್ಲದೆ ಪಿಂಡದ
ನೆಲೆಗಾಶ್ರಯವಿಲ್ಲ
ಜಲಬಿಂದುವಿನ ವ್ಯವಹಾರ ಒಂದೇ.............
ಸಪ್ತಧಾತು ಸಮಂ ಪಿಂಡಂ ಸಮಯೋನಿ
ಸಮುದ್ಭವಂ ಆತ್ಮ ಜೀವ ಸಮಾಯುಕ್ತಂ
ವರ್ಣಾನಾಂ ಕಿಂ ಪ್ರಯೋಜನಂ?**

(ಬ.ವ.ದಿ588)

**ಪಂಚಬ್ರಹ್ಮವ ಕೆಡಿಸಿತ್ತು; ಪ್ರಣವ ಮಂತ್ರವ
ನೀಡಾಡಿತ್ತಲ್ಲಾ, ಕರ್ಮಂಗಳನ್ನು ಕಳೆಯುತ್ತು;
ಆಗಮದ ಹಲ್ಲಗಳೆಯುತ್ತು, ...
ಕೂಡಲಸಂಗಮದೇವನ ಭಕ್ತಿಗಜ ಹೋ!**

(ಬ.ವ.ದಿ745)

**ವೇದ ನಡುನಡುಗಿತ್ತು ಶಾಸ್ತ್ರವಾಗಲಿ ಕೆಲಕ್ಕೆ
ಸಾರಿದ್ದಿತ್ತಯ್ಯಾ! ತರ್ಕ ತರ್ಕಿಸಲರಿಯದೆ
ಮೂಗುವಟ್ಟಿದ್ದಿತ್ತಯ್ಯಾ!
ಆಗಮ ಹೆರತೊಲಗಿ ಅಗಲಿದ್ದಿತ್ತಯ್ಯಾ!
ನಮ್ಮ ಕೂಡಲ ಸಂಗಯ್ಯನು ಚೆನ್ನಯ್ಯನ
ಮನೆಯಲುಂಡ ಕಾರಣ.**

(ಬ.ವ.ದಿ746)

**ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ
ನಿಗಳನಿಕ್ಕುವೆ, ತರ್ಕದ ಬೆನ್ನ ಬಾರನೆತ್ತುವೆ
ಆಗಮದ ಮೂಗ ಕೊಯ್ಯುವೆ, ನೋಡಯ್ಯಾ
ಮಹಾದಾನಿ ಕೂಡಲ ಸಂಗಮದೇವ,
ಮಾದಾರ ಚೆನ್ನಯ್ಯನ ಮಗ ನಾನಯ್ಯಾ**

(ಬ.ವ.ದಿ714)

ಹೀಗೆ ಅವರ ಅನೇಕ ವಚನಗಳಲ್ಲಿ, ವೈದಿಕ ಧರ್ಮದಲ್ಲಿ ಬರುವ ಮೂಢನಂಬಿಕೆ ಮತ್ತು ಕೆಲವು ತಪ್ಪು ಆಚರಣೆಗಳನ್ನು ನೇರವಾಗಿ ಖಂಡಿಸಿದ್ದಾರೆ. ಈ ವಿಷಯದಲ್ಲಿ ಗುರು ಬಸವಣ್ಣನವರು ತಾನೊಬ್ಬ ‘ನ್ಯಾಯ ನಿಷ್ಠುರಿ’ ನ್ಯಾಯಕ್ಕೆ ಬದ್ಧನಾದವನು ಎಂಬುದನ್ನು ಅದೇ ಸಂಪ್ರದಾಯ ಕುಲದಲ್ಲಿ ಜನಿಸಿದ ಅವರು, ಅಲ್ಲಿನ ಆಚರಣೆಗಳಿಗೆ ಬೇಸತ್ತು ಹೊರಬಂದು ವಿರೋಧಿಸಿ, ಪರ್ಯಾಯವಾಗಿ ಹೊಸಧರ್ಮವೊಂದನ್ನು ಹುಟ್ಟುಹಾಕಿರುವುದು ಗಮನಾರ್ಹ.

ಇಂತಹ ವೈಚಾರಿಕ ವಿಚಾರಗಳೊಂದಿಗೆ ಹುಟ್ಟಿಕೊಂಡಿರುವುದು ಲಿಂಗಾಯತ ಧರ್ಮ. ಇದರ ಪರಿಪಾಲಕರಾದ ನಾವು ಮತ್ತು ಭೌದ್ಧಿಕ ವಿಚಾರವಂತರು(ಇತ್ತೀಚಿಗೆ ಪೂಜ್ಯ ಶ್ರೀ ಪೇಜಾವರ ಶ್ರೀಗಳು ಇದಕ್ಕೆ ಕೈ ಜೋಡಿಸಿರವುದು ಶ್ಲಾಘನೀಯ) ಮೂಢನಂಬಿಕೆ ಪ್ರತಿಬಂಧಕ ಕಾಯ್ದೆ ಜಾರಿಗೆ ಬರಲು ಹೊರಾಟ ಮಾಡುವುದು ನಮ್ಮ ಕರ್ತವ್ಯವಾಗಿದೆ. ಅದಕ್ಕೆ ತಮ್ಮಂಥವರ ವಿರೋಧ ಸಲ್ಲದು. ಅಷ್ಟಕ್ಕು ಮೂಢನಂಬಿಕೆ ಪರ ವಾದ ಮಾಡುವವರು ನಾಲ್ಕು ಗೋಡೆ ಮಧ್ಯ ಕುಳಿತು ಲೇಖನ ಬರದಂತೆ ಅಲ್ಲ. ವಾಸ್ತವ ಸ್ಥಿತಿಯನ್ನು ನೋಡಬೇಕು. ಸಮಾಜದ ಕಟ್ಟಕಡೆಯ ಜೀವನ ಮಾಡುವವರ ಬದುಕನ್ನು ಅವರ ಮನೆಬಾಗಿಲಿಗೆ ಹೋಗಿ ಅರ್ಥ ಮಾಡಿಕೊಂಡಾಗ ಮಾತ್ರ ಮೂಢನಂಬಿಕೆಗಳನ್ನು ನಿಷೇಧಿಸಬೇಕೋ ಬೇಡವೋ ಎಂಬುವುದು ಅರಿವಿಗೆ ಬರುತ್ತದೆ.

ಆಚಾರ ಗೊತ್ತಿಲ್ಲದವರಿಗೆ ಮುಟ್ಟು ಮೈಲಿಗೆಯ ಪ್ರಾಕೃತಿಕ ವೈಜ್ಞಾನಿಕ ವಿವರಣೆ ಬೇರೆ ಕೇಡು; ಸ್ವಚ್ಛತೆ ಬೇರೆ, ಸ್ವಾತಂತ್ರ್ಯ ಕೊಡುವುದು ಬೇರೆ. ಆ ಬಗ್ಗೆ ಅರಿವು ಮೂಡಿಸಬೇಕೆ ವಿನಃ ಮೂಢನಂಬಿಕೆಯ ಓಲೈಕೆಗಾಗಿ ಒಂದು ಸುಳ್ಳನ್ನು ಸಾವಿರ ಬಾರಿ ಹೇಳಿ ಸತ್ಯ ಮಾಡಲು ಹೋಗಬಾರದು, ಇತ್ತೀಚಿಗೆ ಚಿತ್ರದುರ್ಗ ಜಿಲ್ಲೆಯ ಗೊಲ್ಲರ ಹಟ್ಟಿಯಲ್ಲಿ ಮಡಿ ಮೈಲಿಗೆ ಎಂದು ಹಲವು ದಿವಸಗಳ ಕಾಲ ಊರ ಹೊರಗಿನ ಸಮುದಾಯ ಭವನದಲ್ಲಿ ಬಾಣಂತಿಯನ್ನು ಮತ್ತು ಮುಟ್ಟಾದ ಮಹಿಳೆಯರನ್ನು ಕೂಡಿಹಾಕಿ ಅಮಾನವೀಯತೆಯನ್ನು ಮೆರೆದ ಘಟನೆ ಇನ್ನೂ ಮಾಸಿಲ್ಲ ತಾನೆ. ಇದೆಯೇ ನಿಮ್ಮ ಶಾಸ್ತ್ರದ ಪ್ರಕಾರ ಗಂಡನ ಕಾಟವಿರಬಾರದೆಂದು ದೂರವಿಡುವ ಬಗೆ?.

ಮತ್ತೊಂದು ಕಡೆ ಇಂದಿಗೂ ಧಾರ್ಮಿಕ ಕೋಮುಗಲಭೆಯಲ್ಲಿ ದಲಿತರ ಮೇಲೆ ಹಲ್ಲೆ, ಜೀವಂತ ದಹನ, ಕಲಬುರ್ಗಿ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಕೆಲವು

ಕಡೆ, ಬೀದರ ಜಿಲ್ಲೆಯ ಜಾಂಪಡ್, ಅಷ್ಪೂರುಗಳ, ಗಾದಗಿ ಊರುಗಳಲ್ಲಿ ಕುಡಿಯುವ ನೀರಿಗಾಗಿ ಬಹಿಷ್ಕಾರಗಳು, ಭಾನಾಮತಿಯ ಅವಾಂತರಗಳು ಸ್ವಾತಂತ್ರ ಭಾರತದಲ್ಲಿ ಇಂದಿಗೂ ನಡೆಯುತ್ತಿರವುದು ಶೋಚನೀಯವಲ್ಲವೆ? ಇದಕ್ಕಾಗಿ ಕಾನೂನಿನ ಬೆಂಬಲ ಬೇಡವೆ?. ಇದೆಲ್ಲಾ ಮೇಲ್ವರ್ಗದವರಾದ ನಿಮಗೆ ಹೇಗೆ ಅರ್ಥವಾಗಬೇಕು. ಅವರಿಗಾಗಿ ನಿಮ್ಮ ಶಾಸ್ತ್ರಗಳು ಯಾವ ಧಾರ್ಮಿಕ ಸಮಾನತೆಯ ಸ್ವಾತಂತ್ರ್ಯವನ್ನು ನೀಡಿವೆ.

ಮಗದೊಂದು ಕಡೆ ಊರಿನ ಜಾತ್ರೆಗಳಲ್ಲಿ ಎಳೆಕಂದಮ್ಮನನ್ನು ಗುಡಿ ಗೋಪುರಗಳಿಂದ ಕೆಳಗೆ ಎಸೆಯುವ ಪದ್ಧತಿ, ಮಾಟ ಮಂತ್ರ ತಂತ್ರಕ್ಕೆ ಒಳಗಾಗಿ ಬಾನಾಮತಿಯ ಪಿಡುಗಿನಿಂದ ನೂರಾರು ಮನೆತನಗಳು ಬೀದಿ ಪಾಲಾಗಿರವುದು, ಮಡೆ ಸ್ನಾನವೆಂದು ಹೇಳಿ ಬ್ರಾಹ್ಮಣರು ಉಂಡುಬಿಟ್ಟಿರುವ ಎಲೆಯ ಮೇಲೆ ಉರುಳಾಡುವುದು ಇದಾವ ನ್ಯಾಯ ಏತಕ್ಕಾಗಿ ಈ ಮೂಢನಂಬಿಕೆ? ಹಾಗಾದರೆ ನೀವು, ದಲಿತರು ಉಂಡು ಬಿಟ್ಟಿರುವ ಎಲೆಯ ಮೇಲೆ ಉರುಳಾಡುವಿರಾ?!!!

ಇಂತಹ ಮೂಢನಂಬಿಕೆಗಳು ಆಧುನಿಕ ಜಗತ್ತಿಗೆ ಬೇಕೆ ಅದಕ್ಕಾಗಿ ಹೋರಾಟ ಬೇಡವೆ, ಈ ದೇಶವು ಆಸಹಿಷ್ಣುತೆಯಿಂದ ಬಳುಲುತ್ತಿರುವುದಕ್ಕೆ ಮೂಲ ವೈದಿಕ ಹಿಂದೂಗಳೆ ಕಾರಣವೆಂಬುವುದನ್ನು ಬೇರೆ ಹೇಳಬೇಕಾಗಿಲ್ಲ. ವಿವೇಕಾನಂದರು ತಮ್ಮ ಕೃತಿ ಶ್ರೇಣಿಯಲ್ಲಿ "ಯೂರೋಪ ದೇಶಗಳಲ್ಲಿ ಮಹಾಯುದ್ಧಗಳ ಸಂದರ್ಭದಲ್ಲಿ ಕ್ರಿಶ್ಚಿಯನ್ನರು ಸೃಷ್ಟಿಸಿದ ಭಯಾನಕ ವಾತಾವರಣವನ್ನು, ಬ್ರಾಹ್ಮಣರು ಭಾರತದಲ್ಲಿ ಶ್ರೇಣಿಕೃತವಾಗಿ ವರ್ಗೀಕರಣ ಮಾಡಿ ಜಾತಿ ಜಾತಿಯಲ್ಲಿ ವೈಷಮ್ಯ ಬೆಳೆಸಿ, ಅದಕ್ಕಿಂತ ಮಿಗಿಲಾದ ಭಯಾನಕ ವಾತಾವರಣವನ್ನು ಸೃಷ್ಟಿಸಿದ್ದಾರೆ". ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಹಿಂದೂ ಧರ್ಮದ ಬಗ್ಗೆ ಅಭಿಮಾನ ತುಂಬಿ ಮಾತನಾಡುವವರು, ಈ ದೇಶವನ್ನು ಹಿಂದೂ ತಳಹದಿಯ ಮೇಲೆ ಕಟ್ಟಲು ಹೊರಟ ದೇಶಭಕ್ತರು ಶೂದ್ರರಿಗೆ, ಅಸ್ಪೃಶ್ಯರಿಗೆ, ಸ್ತ್ರೀಯರಿಗೆ, ಕೆಲವು ಕಡೆ ಇಂದಿಗೂ ಯಾವ ಧಾರ್ಮಿಕ ಸ್ಥಾನಮಾನದ ಸ್ವಾತಂತ್ರ್ಯವನ್ನು ಕೊಟ್ಟಿದ್ದೀರಿ. ಎಂಬುದನ್ನು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು.

ಮೂರನೆಯದಾಗಿ: ಪ್ರಾಣಿ ಬಲಿ ನಿಷೇಧದ ಬಗ್ಗೆ ಉಲ್ಲೇಖ ಮಾಡುತ್ತಾ, ವೇದಗಳಲ್ಲಿ ಯಜ್ಞ-ಯಾಗಗಳಲ್ಲಿ ಪಶುವನ್ನು ಬಲಿ ಕೊಡುವುದು ಮಾನವನಲ್ಲಿರುವ ಪಶುತ್ವ ಅರ್ಪಣೆ, ದೇವತ್ವದ ಪ್ರಾಪ್ತಿಗಾಗಿ. ಇದನ್ನು ನಿಷೇದಿಸುವವರು ಬಕ್ರೀದ್ ಇತ್ಯಾದಿ ಹಬ್ಬಗಳಲ್ಲಿ ಪ್ರಾಣಿಯನ್ನು ಕೊಂದು ಅದರ ಮಾಂಸವನ್ನು ತಿನ್ನುತ್ತಾರಲ್ಲ, ಇದು ಏಕೆ ನಿಷೇಧಿಸಬಾರದು?. ಗುಡಿಗುಂಡಾರಗಳಲ್ಲಿ ಪ್ರಾಣಿ ಬಲಿ ನಡೆಯುತ್ತವೆ ಅಲ್ಲಿ ಏಕೆ ಚಕಾರವೆತ್ತುತ್ತಿಲ್ಲ. ಇದೆಲ್ಲಾ ರಾಜಕೀಯ ವೋಟಿಗಾಗಿಯಲ್ಲವೇ ಎಂದು ರಾಜಕೀಯ ಬೇರೆ ತಳುಕು ಹಾಕಿದ್ದಾರೆ.

ಪ್ರಾಣಿಯ ಮಾಂಸವನ್ನು ತೆಗೆದು ಅಗ್ನಿಯ ಮೂಲಕ ದೇವರಿಗೆ ಅರ್ಪಿಸು ವುದಾಗಲಿ, ಬಾಯಿ ಚಪಲಕ್ಕಾಗಿ ಪ್ರಾಣಿಗಳನ್ನು ಕೊಂದು ತಿನ್ನುವುದಾಗಲಿ, ಗುಡಿಗುಂಡಾರಗಳಲ್ಲಿ ಪ್ರಾಣಿ ಬಲಿ ಮಾಡುವುದಾಗಲಿ ಈ ಎಲ್ಲವೂ ಗುರು ಬಸವಣ್ಣನವರ ತತ್ವದ ಪ್ರಕಾರ ಅಕ್ಷಮ್ಯ ಅಪರಾಧಗಳಾಗಿವೆ. ಶ್ರೀಯುತ ಆಚಾರ್ಯರು, ಮಾನವನಲ್ಲಿರುವ ಪಶುತ್ವ ಮತ್ತು ರಾಕ್ಷಸಿ ಪ್ರವೃತ್ತಿಯನ್ನು ಕಳೆದುಕೊಳ್ಳಲು ಪಶು ಅರ್ಪಣೆ ಎಂದು ವ್ಯಾಖ್ಯಾನಿಸಿ, ತಮ್ಮ ಧರ್ಮಶಾಸ್ತ್ರದ ಬಾಲಿಶತನವನ್ನು ಎತ್ತಿ ತೋರಿಸಿದ್ದಾರೆ. ಪಶು ಅರ್ಪಣೆ ಮಾಡುವುದರಿಂದ ಮಾನವನ ಗುಣದಲ್ಲಿ ಬದಲಾವಣೆಯಾಗದು; ಬದಲಿಗೆ ಆ ಜೀವಿಗಳೂ ಸಹಿತ ತನ್ನಂತೆ ಆತ್ಮ ಹೊಂದಿದ್ದು, 'ಸಕಲ ಜೀವಾತ್ಮರಿಗೆ ಲೇಸನೇ' ಬಯಸುವುದರಿಂದ ಮತ್ತು ನೈತಿಕ ಮೌಲ್ಯಗಳ ಅನುಷ್ಠಾನದಿಂದ ಅವನಲ್ಲಿ ಪಶುಗುಣತ್ವ ದೂರವಾಗುವವು ಎಂಬುದು ಸತ್ಯ ಸಂಗತಿ. ಮೇಲೆ ಹೇಳಿದಂತೆ, ಗುರು ಬಸವಣ್ಣನವರ ಪ್ರಕಾರ ಪಶುವನ್ನು ಬಲಿಕೊಡುವುದೂ ತಪ್ಪು ಅದನ್ನು ತಿನ್ನುವುದೂ ತಪ್ಪೇಯಲ್ಲವೆ? ನಿಮಗೆ ಒಂದು ಜೀವವನ್ನು ಸೃಷ್ಟಿಸಲು



ಬರದು ಎಂದಾಗ ಕೊಲ್ಲುವ ಮಾತೆಂತು? ಇವರಿಬ್ಬರಿಗೂ ಮಾರ್ಗದರ್ಶನ ಮಾಡುವ ವಚನಗಳನ್ನು ಇಲ್ಲಿ ಗಮನಿಸಬಹುದು.

ಮಾತಿನ ಮಾತಿಂಗೆ ನಿನ್ನ ಕೊಂದಿಹರೆಂದು
ಎಲೇ ಹೋತೇ ಅಳು ಕಂಡೆಯಾ!
ವೇದವನೋದಿದವರ ಮುಂದೆ ಅಳು ಕಂಡೆಯಾ!
ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡೆಯಾ!
ನೀನೆತ್ತುದಕ್ಕೆ ತಕ್ಕುದು ಮಾಡುವ ನಮ್ಮ ಕೂಡಲ ಸಂಗಮದೇವ.

(ಬ.ವ.ದಿ577)

ಗಾಂಧಾರಿ ಮಾಂಧಾರಿ ಎಂಬ ಅಹೋ
ರಾತ್ರಿಯಲ್ಲಿ ಲಿಂಗವ ಪೂಜಿಸಬೇಕು...
ಗೋವುಗಳ ಕೊಲುವ ಪಾಪಿಯ ಧ್ವನಿ ಕೇಳದ ಮುನ್ನ.......................
ಲಿಂಗದೇವನ ಪೂಜಿಸಬೇಕು

(ಬ.ವ.ದಿ1031)

ಕೊಲುವವನೇ ಮಾದಿಗ, ಹೊಲುಸು
ತಿಂಬುವವನೇ ಹೊಲೆಯ!
ಕುಲವೇನೋ ಆವಂದಿರ ಕುಲವೇನೋ
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಲಿಂಗದೇವ ಶರಣರೆ ಕುಲಜರು!

(ಬ.ವ.ದಿ714)

ಕೊಲ್ಲೆನಯ್ಯಾ ಪ್ರಾಣಿಗಳ,
ಮೆಲ್ಲೆನಯ್ಯಾ ಬಾಯಿಚ್ಚೆಗೆ;
ಒಲ್ಲೆನಯ್ಯಾ ಪರಸತಿಯರ ಸಂಗವ......

(ಬ.ವ.ದಿ714)

ಆದ್ದರಿಂದ ಗುರು ಬಸವಣ್ಣನವರು ಈ ಎರಡು ವರ್ಗದ ಜನರ ಮಾನಸಿಕ ವಿಚಾರವನ್ನು ಕಿತ್ತೊಗೆಯಲು ಪ್ರಯತ್ನಸಿದರು. ಹಿಂದುಗಳಲ್ಲಿ ಇಂತಹ ಅನೇಕ ತಾರತಮ್ಯಗಳು ಇರುವುದರಿಂದ ತಾವು ಹಿಂದೂಗಳು ಎಂದು ಬಸವತತ್ವ ನಿಷ್ಠರು ಹೇಗೆ ಹೇಳಿಕೊಳ್ಳಬೇಕು? ದಯವೇ ಧರ್ಮದ ಮೂಲವೆಂದು ಹೇಳಿದ ಬಸವ ಧರ್ಮದ ಆಚರಣೆಗಳ ಅನಿವಾರ್ಯತೆ ಇಂದು ಬೇಕಾಗಿದೆ. ಹೀಗಾಗಿಯೆ ಮೌಢ್ಯತೆಯ ಪ್ರತಿಬಂಧಕ ಕಾಯ್ದೆ ಬಸವ ಸಿದ್ಧಾಂತದಡಿಯಲ್ಲಿ ಜಾರಿಯಾಗಬೇಕೆಂಬುದು ನಮ್ಮ ಒತ್ತಾಸೆ.

ನಾಲ್ಕನೆಯದಾಗಿ: ಕತ್ತಲು ಬೆಳಕು ಭೂತ ಪ್ರೇತದ ಬಗ್ಗೆ ಅವರ ಹೇಳಿಕೆಯನ್ನು ಪರಿಗಣಿಸುವುದಾದರೆ, ಕತ್ತಲೆಯಿಂದ ಬೆಳಕಿನ ಕಡೆಗೆ ಸಾಗುವುದು ಮಾನವಧರ್ಮ; ಅಜ್ಞಾನದಿಂದ ಸುಜ್ಞಾನದ ಕಡೆಗೆ ಸಾಗುವುದು ಮಾನವತ್ವದ ಧರ್ಮ. ಇದಕ್ಕೇಕೆ, ಮೂಢನಂಬಿಕೆಗಳಾರಾಧನೆ? ಗಿಡ ಸುತ್ತುವುದು, ಹುತ್ತಿಗೆ ಹಾಲೆರೆವುದು ಸೂರ್ಯ-ಚಂದ್ರ, ಕಾಣದ ದೇವತೆಗಳಿಗೆ ಅರ್ಘ್ಯ ಬಿಡುವುದು, ದೇವರ ಹೆಸರಲ್ಲಿ ದೇವದಾಸಿ ಬಿಡುವುದು, ಮಾಟ, ಮಂತ್ರ, ತಂತ್ರ, ತಾಯತ ಇತ್ಯಾದಿ ಅವೈಜ್ಞಾನಿಕ ಆಚರಣೆಗಳೇಕೆ? ಶ್ರದ್ಧೆಯಿಂದ ಏಕದೇವನಲ್ಲಿ ನಂಬಿಕೆಯಿಟ್ಟು ನೈತಿಕ ಮೌಲ್ಯಗಳಿಂದ ಬದುಕಿದರೆ ಸಾಲದೆ? ಮೂಢನಂಬಿಕೆಗೆ ಗುರಿ ಯಾಗಿ, ಅದೆಷ್ಟೋ ಜನ ತಮ್ಮ ಜೀವನವನ್ನ ನರಕ ಯಾತನೆ ಮಾಡಿಕೊಂಡಿದ್ದಾರೆ. ಇದಕ್ಕೆ ಪರಿಹಾರ ಇಲ್ಲವೇ? ಮಾನವನ ಜೀವನಕ್ಕೆ ಮಾರಕವಾದ ಅನಿಷ್ಟ ಪದ್ಧತಿಗಳು ಯಾವುದೇ ಧರ್ಮದಲ್ಲಿದ್ದರೂ ಖಂಡನೀಯ. ಅವುಗಳನ್ನು ನಿಷೇಧಿಸುವುದು ನಮ್ಮ ನಿಮ್ಮ

ಕರ್ತ್ಯವ್ಯವಲ್ಲವೆ?.

ಐದನೆಯದಾಗಿ: ತಮ್ಮ ಲೇಖನದಲ್ಲಿ ವಿಶ್ವದ ಪ್ರಪ್ರಥಮ ಮಹಿಳಾ ಮಹಾಜಗದ್ಗುರು ಡಾ॥ ಮಾತೆ ಮಹಾದೇವಿಯವರ ಬಗ್ಗೆ ಲಿಂಗದೇವ ವಿಷಯ ಪ್ರಸ್ತಾಪ ಮಾಡಿ, ಅವಹೇಳನಕಾರಿ ಹೇಳಿಕೆಯನ್ನು ನೀಡಿದ್ದಾರೆ. ಇದನ್ನು ಖಂಡಿಸುತ್ತೇವೆ. ಪೂಜ್ಯ ಮಾತೆ ಮಹಾದೇವಿಯವರು ಈಗಾಗಲೇ ಇಪ್ಪತ್ತು ವರ್ಷದಿಂದ ಇದಕ್ಕೆ ತಾತ್ವಿಕ ಉತ್ತರ ಕೊಟ್ಟು ಮುಗಿದ ಅಧ್ಯಾಯವಾದರೂ, ಪುನಃ ಪುನಃ ಅದನ್ನೇ ಕೆಣಕಿ ಮಾತಾಜಿಯವರ ಜೊತೆ ತಾತ್ವಿಕ ಚರ್ಚೆಗೆ ಬರಲಾರದ ಇವರು ಕೀಳು ಪ್ರಚಾರ ಮಾಡುತ್ತಾ ಹತ್ತರಲ್ಲಿ ಹನ್ನೊಂದನೆಯವರಾಗಿ ಬಸವ ಭಕ್ತರಲ್ಲಿ ಒಡುಕುಂಟು ಮಾಡುವ ತಂತ್ರವು ಇವರದಾಗಿದೆ.

ಪೂಜ್ಯ ಮಾತೆ ಮಹಾದೇವಿಯವರು ಕೂಡಲ ಸಂಗಮದೇವ ಅಂಕಿತವನ್ನು ತಮ್ಮ ಇಚ್ಛೆಯ ಪೂರಕವಾಗಿ 'ಲಿಂಗದೇವ' ಎಂದು ಬದಲಾಯಿಸದೆ, ಗುರು ಬಸವಣ್ಣನವರ ಜೀವಿತದ ಮೂರು ಘಟ್ಟಗಳನ್ನು ಗುರುತಿಸಿ, ಸಗುಣೋಪಾಸನೆ ಮತ್ತು ನಿರ್ಗುಣೋಪಾಸನೆಯನ್ನು ಎತ್ತಿ ತೋರಿಸಿದ್ದಾರೆ. ಬಸವಣ್ಣನವರ ಸಾಕ್ಷಾತ್ಕಾರಕ್ಕಿಂತ ಮೊದಲಿನ ಸ್ಥಿತಿಯ ಸಗುಣೋಪಾಸನೆಯನ್ನು ಬಿಂಬಿಸುವ ವಚನಗಳಿಗೆ ಕೂಡಲ ಸಂಗಮದೇವ ಎಂಬ ಅಂಕಿತ ಹಾಗೆಯೇ ಇದ್ದು, ಸಾಕ್ಷಾತ್ಕಾರ ಹೊಂದಿದ ಬಳಿಕ ಲಿಂಗದೇವ ಎಂದು ಬದಲಾಯಿಸಲು ಕಾರಣ ಸಮಾಜದಲ್ಲಿ ಏಕದೇವೋಪಾಸನೆ ಅಳವಡಲಿ ಎಂಬುದೇ ಅವರ ಉದ್ದೇಶವಾಗಿದೆ.(ತಾತ್ವಿಕ ಖಚಿತಕ್ಕಾಗಿ ಲಿಂಗದೇವನ ಲೀಲಾ ವಿಶೇಷ ಪುಸ್ತಕವನ್ನು ಓದಿರಿ) 'ಲಿಂಗದೇವ' ಹೆಸರು ಬಸವಾದಿ ಪ್ರಮಥರ ವಚನಗಳಲ್ಲಿ ದೊರಕುವ ದೇವನ ಹೆಸರೇ ವಿನಃ, ಲಿಂಗಾನಂದ ಗುರುವಿನ ಹೆಸರಲ್ಲ ಎಂಬುವುದು ಇನ್ನುವರೆಗೂ ತಮ್ಮಂತಹ ಪಂಡಿತರು ಅರಿತುಕೊಳ್ಳಲಿಲ್ಲವಲ್ಲವೆಂಬ ಅನುಕಂಪವೂ ನಮಗಿದೆ.

ಆರನೇಯದಾಗಿ: ಗುರು ಬಸವಣ್ಣನವರ ಹೆಸರಿಗೆ ಜೋತುಬಿದ್ದು ಮಹಾತ್ಮರಿಗೆ ಭಾರಿ ಅಪಚಾರ ಮಾಡುತ್ತಿದ್ದಾರೆ ಎಂದು ಎಲ್ಲರನ್ನು ಒಂದೇ ಸೂರಿನಡಿಯಲ್ಲಿ ನಿಲ್ಲಿಸಿರುವುದು ಮತ್ತು ತಮ್ಮ ಲೇಖನದಲ್ಲಿ ಲೋಕ ಪೂಜ್ಯ ಮಹಾಮಾನವತಾವಾದಿ ಗುರು ಬಸವಣ್ಣನವರ ಮೂರ್ತಿಯ ಚಿತ್ರವನ್ನು ತೋರಿಸಿ ಒಂದು ಧರ್ಮದ ಸಮುದಾಯವನ್ನು ತೇಜೋವಧೆ ಮಾಡಿರುವುದು ತಮ್ಮ ಬುದ್ಧಿಗೆ ತಕ್ಕುದಲ್ಲ.

ಪರಮ ಪೂಜ್ಯ ಮಾತಾಜಿಯವರು, ಗುರು ಬಸವಣ್ಣನವರ ವ್ಯಕ್ತಿತ್ವಕ್ಕೆ ತಕ್ಕಂತೆ ಮೂವತ್ತಾರು ವರ್ಷ ಅವರು ನಡೆದಾಡಿದ ಪುಣ್ಯಭೂಮಿ, ವಿಶ್ವಕ್ಕೆ ಪ್ರಜಾಪ್ರಭುತ್ವವನ್ನು ಸಾರಿದ ಅನುಭವ ಮಂಟಪ ಹೊಂದಿದ ಶರಣಭೂಮಿ ಬಸವಕಲ್ಯಾಣದಲ್ಲಿ 108 ಅಡಿ ಗುರು ಬಸವಣ್ಣನವರ ದಿವ್ಯ ಮೂರ್ತಿಯನ್ನು ನಿರ್ಮಿಸುವುದರ ಜೊತೆಗೆ ಅವರು ನೀಡಿದ ವಚನ ಸಂದೇಶಗಳನ್ನು ಜಗತ್ತಿಗೆ ಸಾರುವುದೇ ಆಗಿದೆ.

ಮೂರ್ತಿ ಎಂದಾಕ್ಷಣ, ಮೂರ್ತಿ ಪೂಜೆ ವಿರೋಧಿಸುವವರು ಇದನ್ಯಾಕೆ ನಿರ್ಮಿಸಿದರು ಎಂದು ಮಾತನಾಡಿಕೊಳ್ಳುತ್ತಾರೆ.

ಆದರೆ ಒಂದು ವಿಷಯವನ್ನು ಇಲ್ಲಿ ತಿಳಿದುಕೊಳ್ಳುವುದು ಮುಖ್ಯವಾಗಿದೆ. ಇತಿಹಾಸದಲ್ಲಿ ಚರಿತ್ರೆ ಮತ್ತು ಚಾರಿತ್ರ್ಯ ಹೊಂದಿದ ಒಬ್ಬ ಮಹಾತ್ಮನ ಮೂರ್ತಿ ಪ್ರತಿಷ್ಠಾಪಿಸುವುದೆಂದರೆ, ಅದನ್ನು ನೋಡಿದಾಕ್ಷಣ ಅವರ ವ್ಯಕ್ತಿತ್ವ ಹಾಗೂ ಅವರ ಸಂದೇಶಗಳು ಚಿತ್ತಪಟಲದ ಮೇಲೆ ಹಾದುಹೋಗಿ ಅದರಂತೆ ನಡೆಯಬೇಕೆಂಬ ಪ್ರೇರಣೆ ಉಂಟಾಗುತ್ತದೆ. ಅದರೆ ಇತಿಹಾಸವೇ ಇಲ್ಲದ ಪೌರಾಣಿಕ ಮತ್ತು ಕಾಲ್ಪನಿಕ ದೇವತೆಗಳನ್ನು ಉಗ್ರರೂಪ ಕೊಟ್ಟು ಗುಡಿ-ಗುಂಡಾರಗಳಲ್ಲಿ ಪ್ರತಿಷ್ಠಾಪನೆ ಮಾಡಿ ಅಲ್ಲಿ ಮೂಢಾಚರಣೆಗಳಿಗೆ ಆಸ್ಪದ ನೀಡಿದರೆ, ಯಾವ ಬುದ್ಧಿ ಜೀವಿಗಳು ಪ್ರೇರಣೆ ಪಡೆದಾರು?. ಇಂತಹ ವಿಚಾರಗಳ ಕಡೆ ತಾವು ಗಮನ ಹರಿಸಬೇಕೇ ವಿನಃ ಅರ್ಥವಿಲ್ಲದ ವಿಚಾರಕ್ಕೆ ಬದ್ಧರಾಗಿರುವುದು ಸೂಕ್ತವಲ್ಲ.



ಪುಣ್ಯಾತ್ಮ ಯಾರು?

ಹಿಮಾಲಯ ತಪ್ಪಲಲ್ಲಿ ಇಂದು ಪ್ರಾಚೀನ ಕಾಲದ ಪ್ರಸಿದ್ಧ ಶಿವನ ದೇವಾಲಯವಿತ್ತು. ಒಂದು ದಿನ ಆ ಪ್ರಾಂತ್ಯದ ರಾಜನ ಕನಸಿನಲ್ಲಿ ಶಿವನು ಬಂದು, ವಿದ್ವಾಂಸರನ್ನು ಮತ್ತು ಧರ್ಮಾತ್ಮರನ್ನು ದೇವಾಲಯಕ್ಕೆ ಕರೆಯಲು ಹೇಳಿದನು. ರಾಜನು ಮರುದಿನವೇ ನಗರದ ಎಲ್ಲ ವಿದ್ವಾಂಸರು, ಸಾಧುಗಳು, ಪುಣ್ಯಾತ್ಮರು ಮತ್ತು ದಾನಿಗಳನ್ನು ಕರೆದನು. ಎಲ್ಲರೂ ನದಿಯಲ್ಲಿ ಸ್ನಾನ ಮಾಡಿ ದೇವಸ್ಥಾನಕ್ಕೆ ಬಂದು ಸಭಾಮಂಟಪದಲ್ಲಿ ಸೇರಿದರು. ಆ ದಿನ ದೇವಸ್ಥಾನದಲ್ಲಿ ಬಹಳಷ್ಟು ಜನ ನೆರೆದಿದ್ದರು. ಆಗ ರಾಜನು ತನ್ನ ಸ್ವಪ್ನವನ್ನು ಎಲ್ಲರಿಗೂ ತಿಳಿಸಿದನು. ಶಿವನಿಗೆ ಆರತಿಯಾಯಿತು. ಘಂಟಾನಾದದ ನಂತರ ಅಕಸ್ಮಾತ್ತಾಗಿ ಮಂದಿರವೆಲ್ಲವೂ ಪ್ರಕಾಶಮಾನವಾಗಿ ಕಾಣಿಸತೊಡಗಿತು. ನೋಡಿದಾಗ ಶಿವನ ಮೂರ್ತಿಯ ಹತ್ತಿರ ಒಂದು ಸ್ವರ್ಣ ಪತ್ರವು ಬಿದ್ದಿತ್ತು.

'ಯಾರು ಪುಣ್ಯಾತ್ಮರೋ ಅವರಿಗೆ ಈ ಪತ್ರ ಬಹುಮಾನವಾಗಿ ನೀಡಬೇಕು. ಏಕೆಂದರೆ ಈ ಪತ್ರವನ್ನು ಪುಣ್ಯಾತ್ಮರಲ್ಲದವರು ಮುಟ್ಟಿದರೆ ಮಣ್ಣಾಗುತ್ತದೆ' ಎಂದು ಬರೆದಿತ್ತು. ರಾಜನು ಆ ಪತ್ರವನ್ನು ಎಲ್ಲರಿಗೂ ತೋರಿಸಿದನು. ಪ್ರತಿ ಸೋಮವಾರ ನಡೆಯುವ ಸಭೆ ನಡೆಸಲು ನಿರ್ಧರಿಸಿ ಯಾರು ತಮ್ಮನ್ನು ತಾವು ಪುಣ್ಯಾತ್ಮ ಎಂದು ಸಾಬೀತುಪಡಿಸುತ್ತಾರೋ ಅವರಿಗೆ ಸ್ವರ್ಣಪತ್ರ ಕೊಡಲಾಗುವುದು ಎಂದು ಡಂಗುರ ಹೊಡೆಸಲಾಯಿತು.

ದೇಶದ ನಾಲ್ಕು ದಿಕ್ಕುಗಳಲ್ಲಿಯೂ ಈ ಸಮಾಚಾರ ಹರಡಿತು. ದೂರ ದೂರದಿಂದ ಎಲ್ಲರೂ ದೇವಾಲಯಕ್ಕೆ ಬರಲಾರಂಭಿಸಿದರು. ಒಬ್ಬ ಬ್ರಾಹ್ಮಣನು ಬಹಳ ತಿಂಗಳಿನಿಂದ

ಸತತವಾಗಿ ಚಾಂದ್ರಾಯಣ ವ್ರತವನ್ನು ಮಾಡಿದ್ದನು. ಅವನ ಕೈಗೆ ಸ್ವರ್ಣಪತ್ರವನ್ನು ಕೊಡಲಾಯಿತು. ಬ್ರಾಹ್ಮಣನು ಪತ್ರ ಹಿಡಿದ ಕೂಡಲೇ ಅದು ಮಣ್ಣಾಗಿ ಹೋಯಿತು. ಅದರ ಪ್ರಕಾಶವು ನಾಶವಾಯಿತು. ಬ್ರಾಹ್ಮಣನಿಗೆ ನಾಚಿಕೆಯಾಗಿ ಆ ಪತ್ರವನ್ನು ಹಿಂದಿರುಗಿಸಿದನು. ರಾಜನ ಕೈಗೆ ಸೇರಿದ ಕೂಡಲೇ ಆ ಪತ್ರ ಪುನಃ ಸ್ವರ್ಣವಾಯಿತು.

ಒಬ್ಬರು ಹಿರಿಯರು ಬಹಳಷ್ಟು ವಿದ್ಯಾಲಯಗಳನ್ನು ಕಟ್ಟಿಸಿದ್ದರು. ಎಷ್ಟೋ ಸ್ಥಳಗಳಲ್ಲಿ ಸೇವಾಶ್ರಮವನ್ನು ನಡೆಸುತ್ತಿದ್ದರು. ಅವರಲ್ಲಿದ್ದ ಹಣವೆಲ್ಲವನ್ನು ದಾನ ಮಾಡಿದ್ದರು. ಇವರು ಸ್ವರ್ಣಪತ್ರವನ್ನು ತೆಗೆದುಕೊಳ್ಳಲು ಬಂದಿದ್ದರು. ಆದರೆ ಅವರ ಕೈಗೆ ಹೋದ ಕೂಡಲೇ ಪತ್ರವು ಮಣ್ಣಾಗಿ ಹೋಯಿತು. ಇದೇ ರೀತಿ ಬಹಳಷ್ಟು ಜನರು ಬಂದರು. ತಿಂಗಳುಗಳು ಕಳೆದರೂ ಸ್ವರ್ಣ ಪತ್ರವು ಯಾರಿಗೂ ಸಿಗಲಿಲ್ಲ. ಬಹಳಷ್ಟು ಜನರು ಪತ್ರ ಪಡೆಯಲೆಂದು ದೇವಾಲಯದ ಬಳಿಯೇ ದಾನ, ಪುಣ್ಯಕರ್ಮಗಳನ್ನು ಮಾಡಲಾರಂಭಿಸಿದರು.

ಒಂದು ದಿನ ಒಬ್ಬ ವಯಸ್ಸಾದ ರೈತನು ಶಿವನ ದರ್ಶನಕ್ಕೆಂದು ಮಾತ್ರ ಬಂದಿದ್ದನು. ಅವನ ಬಟ್ಟೆಗಳು ಹರಿದಿದ್ದವು. ಆ ರೈತನ ಬಳಿ ಬಟ್ಟೆಯಲ್ಲಿ ಸುತ್ತಿದ ಬುತ್ತಿ ಮತ್ತು ಒಂದು ಹರಿದ ಕಂಬಳಿಯಿತ್ತು. ದೇವಸ್ಥಾನದ ಬಳಿ ಜನರು ಬಡವರಿಗೆ ಬಟ್ಟೆಗಳು ಮತ್ತು ತಿಂಡಿಯನ್ನು ಹಂಚುತ್ತಿದ್ದರು. ಒಬ್ಬನು ದೇವಸ್ಥಾನದಿಂದ ಸ್ವಲ್ಪ ದೂರದಲ್ಲಿ ಬಿದ್ದು ಒದ್ದಾಡುತ್ತಿದ್ದನು. ಅವನನ್ನು ಯಾರೂ ನೋಡುತ್ತಿರಲಿಲ್ಲ. ಅವನು ಹಸಿವಿನಿಂದ ಬಳಲುತ್ತಿದ್ದನು. ಆ ರೈತನಿಗೆ ಆ ವ್ಯಕ್ತಿಯ ಮೇಲೆ ದಯೆಯುಂಟಾಯಿತು. ಅವನು ತನ್ನ ಬುತ್ತಿಯನ್ನು ಬಡವನಿಗೆ ತಿನ್ನಲು ಕೊಟ್ಟು ಅವನ ಕಂಬಳಿಯನ್ನು ಆ ಬಡವನಿಗೆ ಹೊದಿಸಿ ರೈತನು ದೇವಸ್ಥಾನಕ್ಕೆ ಹೋದನು.

ಸ್ವರ್ಣಪತ್ರ ಪಡೆಯಲು ಬಂದವರೆಲ್ಲರೂ ಸೋತುಹೋಗಿದ್ದನ್ನು ನೋಡಿ ರಾಜ, ಒಬ್ಬ ರಾಜಗುರುಗಳನ್ನು ಭೇಟಿ ಮಾಡಿ ಅವರ ಆಜ್ಞೆಯಂತೆ ದೇವಾಲಯಕ್ಕೆ ಬರುವ ಎಲ್ಲ ದರ್ಶನಾರ್ಥಿಗಳ ಕೈಗೂ ಈ ಸ್ವರ್ಣಪತ್ರ ಕೊಡಲು ನಿರ್ಧರಿಸಿದನು. ರೈತನು ದರ್ಶನಕ್ಕೆಂದು ಹೋದ ಅವನ ಕೈಗೆ ಸ್ವರ್ಣಪತ್ರ ಕೊಟ್ಟಾಗ ಸ್ವರ್ಣಪತ್ರವು ಸ್ವರ್ಣಪತ್ರವಾಗಿಯೇ ಉಳಿಯಿತು. ಆಗ ರಾಜನು ಅಂದಿನ ವರೆಗೆ ಸ್ವರ್ಣಪತ್ರ ಪಡೆಯಲು ಬಂದವರೆಲ್ಲರಿಗೆ ದೇವಾಲಯ ಬಳಿ ಬರಲು ತಿಳಿಸಿದನು.

ಎಲ್ಲರ ಎದುರು ರೈತನ ಎದುರು ಸ್ವರ್ಣಪತ್ರ ನೀಡಲು ಹೊರಟಾಗ ಚಾಂದ್ರಾಯಣ ವ್ರತ ಮಾಡಿದ್ದ ಬ್ರಾಹ್ಮಣ ಹಾಗೂ ಸೇವಾಶ್ರಮ, ವಿದ್ಯಾಲಯ ನಡೆಸುತ್ತಿದ್ದ ಹಿರಿಯ ವ್ಯಕ್ತಿ ಹಾಗೂ ಪತ್ರ ಪಡೆಯಲು ಬಂದು ಸಾಧ್ಯವಾಗದೆ ಹೋದವರೆಲ್ಲಾ ಬಂದು ರಾಜನಿಗೆ ನಮ್ಮ ಕೈಲಿ ಪತ್ರ ಏಕೆ ಮಣ್ಣಾಯಿತು ಎಂದು ಕೇಳಿದರು. ಆಗ ರಾಜಗುರುಗಳು ಬ್ರಾಹ್ಮಣನು ಹಾಗೂ ಸೇವಾಶ್ರಮ ಕಟ್ಟಿಸಿದವರು ಕ್ರಮವಾಗಿ ಪಾರಾಯಣ ಹಾಗೂ ಸೇವೆ ಮಾಡಿ ಪುಣ್ಯ ಗಳಿಸಿದ್ದರು. ಆದರೆ ಅವರು ತಾವೇ ಪುಣ್ಯವಂತರು ಎಂದು ತಿಳಿದು ಸ್ವರ್ಣಪತ್ರ ಪಡೆಯಲು ಬಂದರು. ಆಗ ಅವರಲ್ಲಿ ಪುಣ್ಯದ ಜತೆ ಸ್ವಲ್ಪ ಅಹಂಕಾರ ಕಾಣಿಸಿತು. ಆದರೆ ರೈತ ಬಂದಿದ್ದು ಶಿವನ ದರ್ಶನಕ್ಕೆ ಮಾತ್ರ. ಆಗ ತನ್ನಲ್ಲಿದ್ದ ಸ್ವಲ್ಪ ಬುತ್ತಿ ಮತ್ತು ಒಂದೇ ಒಂದು ಕಂಬಳಿಯನ್ನು ಕೂಡಾ ತನಗಾಗಿ ಇಟ್ಟುಕೊಳ್ಳದೇ ದಾನ ಮಾಡಿ ಇನ್ನಷ್ಟು ಪುಣ್ಯ ಗಳಿಸಿದನು. ಆಗ ಅವನ ಖಾತೆಯಲ್ಲಿ ಮತ್ತಷ್ಟು ಪುಣ್ಯ ಜಮಾ ಆಯಿತು. ನಾವು ಎಷ್ಟೇ ದಾನಧರ್ಮ ಮಾಡಿ ಪುಣ್ಯ ಗಳಿಸಿದರೂ ಅಲ್ಲಿ ನಾನು ಎಂಬುದು ಕಾಣಬಾರದು. ಏಕೆಂದರೆ ನಮ್ಮ ಚಲನವಲನಗಳನ್ನು ಪರಮಾತ್ಮನು ಗಮನಿಸುತ್ತಿರುತ್ತಾನೆ ಎಂದು ತಿಳಿಸಿ ರೈತನಿಗೆ ಸ್ವರ್ಣಪತ್ರ ನೀಡಿದರು.

ನೀತಿ ವಚನ:

ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ
ಕೊಟ್ಟಿದ್ದು ಕೆಟ್ಟಿತೆನಬೇಡ,
ಅದು ಮುಂದೆ ಕಟ್ಟಿಹುದು ಬುತ್ತಿ ಸರ್ವಜ್ಞ.

ಆಪ್ತ ಸಮಾಲೋಚನೆ

ಭದ್ರಾವತಿ ಸಂತೋಷ್
B.Com., PGDMM,
M.Sc [Psychology], DPCS., CLST, Csc
ಆಪ್ತ ಸಮಾಲೋಚಕರು ಮತ್ತು ಮನೋಚಿಕಿತ್ಸಕರು



ಮನುಷ್ಯನಿಗೆ ದೈಹಿಕ ಸ್ವಾಸ್ಥತೆ ಎಷ್ಟು ಮುಖ್ಯವೋ ಮಾನಸಿಕ ಆರೋಗ್ಯ ಸ್ವಾಸ್ಥತೆ ಕೂಡ ಅಷ್ಟೇ ಮುಖ್ಯ. ಜೀವನದಲ್ಲಿ ಯಾವ ಸಮಸ್ಯೆಯು ಶಾಶ್ವತವಲ್ಲ ಹಾಗೂ ಜೀವನದಲ್ಲಿ



ಬರುವ ಎಲ್ಲಾ ಪ್ರತಿಕೂಲ ಸಂಗತಿಗಳು ಇಡೀ ನಮ್ಮ ಜೀವನವನ್ನು ಆವರಿಸಿಕೊಳ್ಳುವುದಿಲ್ಲ.

ಆದರೆ ಕೆಲವೊಮ್ಮೆ ನಮ್ಮ ಜೀವನದಲ್ಲಿ ನಾವು ಊಹಿಸದೆ ಬರುವ ಸಮಸ್ಯೆಗಳು ಅಥವಾ ಒಂದರಮೇಲೆ ಒಂದರಂತೆ ಬಂದೊದಗುವ ಸಮಸ್ಯೆಗಳು ನಮ್ಮನ್ನು ಅಧೀರರನ್ನಾಗಿಸಿ ಬಿಡುತ್ತದೆ. ಏಕೆಂದರೆ ನಮ್ಮ ಮನಸ್ಸು ಕದಡಿದಾಗ, ನಾವು ಅಸಮಾಧಾನಗೊಂಡಾಗ, ತೊಂದರೆಗೀಡಾದಾಗ ನಮ್ಮ ಜೀವನದಲ್ಲಿ ಶಾಂತಿ ಮತ್ತು ಸ್ಥಿರತೆ ಕಳೆದುಕೊಂಡಾಗ ನಮ್ಮ ಸುತ್ತಮುತ್ತ ನಡೆಯುತ್ತಿರುವ ಹಲವಾರು ವಿಷಯಗಳನ್ನು ಅನುಭವಿಸುವ ಮತ್ತು ಈ ಕ್ಷಣದಲ್ಲಿ ಬದುಕುವ ಸಾಮರ್ಥ್ಯ ಕಳೆದುಕೊಳ್ಳುತ್ತೇವೆ.

ಕೆಲವೊಮ್ಮೆ ಜೀವನದಲ್ಲಿ ಹಲವರಿಗೆ ದಾರಿ ತೋರಿಸಿದ ನಾವೇ ದಾರಿ ಕಾಣದಂತಾಗಿ ಬಿಡುತ್ತೇವೆ. ಕೆಲವೊಮ್ಮೆ ಸಮಸ್ಯೆಗಳಲ್ಲಿ ಸಿಲುಕಿದ ಮನಸ್ಸು ವ್ಯಸನಗಳೆಡೆಗೆ ಹಾಗೂ ವಾಮ ಮಾರ್ಗದಡೆಗೆ ಎಳೆಯುತ್ತದೆ. ಯಾರಲ್ಲಿಯೂ ಹೇಳಿಕೊಳ್ಳದ ವಿಷಯಗಳು, ನಕಾರಾತ್ಮಕ ಯೋಚನೆಗಳು ಸಮಸ್ಯೆಯನ್ನು ಹಾಗೂ ಮಾನಸಿಕ ಸ್ಥಿತಿಯನ್ನು ಇನ್ನಷ್ಟು ಗೊಂದಲವಾಗಿಸುತ್ತದೆ.

ನಮ್ಮ ದೇಹಕ್ಕೆ ಚಿಕ್ಕ ತರಚು ಗಾಯವಾದರೆ ನಾವು ಸ್ವ ಚಿಕಿತ್ಸೆ ಮಾಡಿಕೊಂಡು ಸ್ವಲ್ಪ ದಿನ ಕಳೆದರೆ ತಾನೇ ಸರಿ ಹೋಗುತ್ತದೆ ಎಂದು ಸುಮ್ಮನಾಗುತ್ತೇವೆ. ಆದರೆ ದೇಹಕ್ಕೆ ದೊಡ್ಡ ಪೆಟ್ಟಾದಾಗ ಕೂಡಲೆ ವೈದ್ಯರ ಬಳಿ ಧಾವಿಸುತ್ತೇವೆ ವಿನಹ ಕಾಲವೇ ಎಲ್ಲವನ್ನು ವಾಸಿ ಮಾಡುತ್ತದೆ ಅಥವಾ ಮರೆಸುತ್ತದೆ ಎಂದು ಸುಮ್ಮನಾಗುವುದಿಲ್ಲ. ಹಾಗೆಯೇ ಮನುಷ್ಯ ಮಾನಸಿಕವಾಗಿ ಕುಗ್ಗಿದಾಗ ಭಾವನಾತ್ಮಕವಾಗಿ ನೊಂದಾಗ ಜೀವನ ಏರಿಳಿತಗಳಿಗೆ ಸಿಲುಕಿ ನಲುಗಿದಾಗ ಆತ್ಮ ನ್ಯೂನ್ಯತೆಯಿಂದ ಬಳಲುತ್ತಿರುವಾಗ ವ್ಯಕ್ತಿಗೆ ಆಪ್ತ ಸಮಾಲೋಚನೆಯ ಮುಖಾಂತರ ಸಲಹೆ, ಸಾಂತ್ವನ, ಮಾರ್ಗದರ್ಶನ ಅಗತ್ಯವಿರುತ್ತದೆ.

ಆಪ್ತ ಸಮಾಲೋಚನೆಯಲ್ಲಿ:

1. ವ್ಯಕ್ತಿಗೆ ಎದುರಾಗಿರುವ, ಮಾನಸಿಕ-ಸಾಮಾಜಿಕ ಸಮಸ್ಯೆಗಳನ್ನು ಹೇಗೆ ನಿಭಾಯಿಸಬೇಕು ಮತ್ತು ವ್ಯಕ್ತಿತ್ವ

ಓದುಗರಿಗೆ ವಿಶೇಷ ಸೂಚನೆ

ಫೆಬ್ರವರಿ 1, 2016 ರಿಂದ ಪ್ರತಿ ಸೋಮವಾರ, ಮಂಗಳವಾರ ಹಾಗೂ ಬುಧವಾರ ಸಂಜೆ 5.00 ರಿಂದ 8.00 ರವರೆಗೆ ಉಚಿತ ಆಪ್ತ ಸಮಾಲೋಚನೆ ಸೌಲಭ್ಯವಿರುತ್ತದೆ

ಸ್ಥಳ : ಬಸವ ಮಂಟಪ, ಪಶ್ಚಿಮ ಕಾರ್ಡ್ ರಸ್ತೆ, ನವರಂಗ್ ಟಾಕೀಸ್ ಹತ್ತಿರ, ರಾಜಾಜಿನಗರ, ಬೆಂಗಳೂರು-560010

ಅಗತ್ಯವಿರುವವರು ಮುಂಚಿತವಾಗಿ ಅಪಾಯಿಂಟ್‌ಮೆಂಟ್‌ಗಾಗಿ 9148671215 ಸಂಪರ್ಕಿಸತಕ್ಕದ್ದು.

* ಆಪ್ತ ಸಮಾಲೋಚನೆಗೆ ಬರುವ ವ್ಯಕ್ತಿ, ವಿವರ ಹಾಗೂ ವಿಷಯಗಳನ್ನು ಅತ್ಯಂತ ಗೌಪ್ಯವಾಗಿರಿಸಲಾಗುವುದು.
* ಬಲವಂತವಾಗಿ ಯಾರನ್ನೂ ಕೌನ್ಸಿಲಿಂಗ್ ಮಾಡಲಾಗುವುದಿಲ್ಲ.

ಸುಧಾರಣೆ ಹಾಗೂ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಆರೋಗ್ಯ ರಕ್ಷಣೆಯ ಬಗ್ಗೆ ಹಾಗೂ ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಏನು ಮಾಡಬೇಕೆಂದು ಮಾರ್ಗದರ್ಶನ ಮಾಡಲಾಗುವುದು.

2. ವ್ಯಕ್ತಿಯ ಕೀಳರಿಮೆಯನ್ನು ತಗ್ಗಿಸಿ ಆತ್ಮ ವಿಶ್ವಾಸ ಮತ್ತು ಸ್ವಾಭಿಮಾನವನ್ನು ಹೆಚ್ಚಿಸಲು ಪ್ರಯತ್ನಿಸಲಾಗುತ್ತದೆ. ವ್ಯಕ್ತಿಯ ಬಲ ಮತ್ತು ದೌರ್ಬಲ್ಯಗಳನ್ನು ಗುರುತಿಸಲಾಗುತ್ತದೆ ಹಾಗೂ ಅದನ್ನು ನಿರ್ವಹಿಸುವ ಮಾರ್ಗವನ್ನು ಸೂಚಿಸಲಾಗುತ್ತದೆ. ತಾನೊಬ್ಬ ವಿಫಲ ಅಪ್ರಯೋಜಕ ವ್ಯಕ್ತಿ ಎನ್ನುವ ನಕಾರಾತ್ಮಕ ಭಾವನೆಯನ್ನು ತೆಗೆದು ಹಾಕುವ ವಿಧಾನಗಳ ಬಗ್ಗೆ ಮಾರ್ಗದರ್ಶನ ಮಾಡಲಾಗುತ್ತದೆ.

3. ವಿದ್ಯಾರ್ಥಿಗಳಿಗೆ ಪಠ್ಯ ನಿರ್ವಹಣೆ, ಸಮಯ ನಿರ್ವಹಣೆ, ನೆನಪಿನ ಶಕ್ತಿ ವೃದ್ಧಿಸಿಕೊಳ್ಳುವ ಬಗ್ಗೆ ಹಾಗೂ ಪರೀಕ್ಷಾ ಸಿದ್ದತೆ ಬಗ್ಗೆ ಮಾರ್ಗದರ್ಶನ ಮಾಡಲಾಗುವುದು.

4. ನಿರಾಶಾವಾದವನ್ನು ಆಶಾವಾದವಾಗಿ ಪರಿವರ್ತಿಸುವುದು. ನನಗೆ ಒಳ್ಳೆಯದಾಗುವುದಿಲ್ಲ. ನನಗೆ ಯಶಸ್ಸು ದೊರೆಯುವುದಿಲ್ಲ. ಪ್ರಯತ್ನ ಪಟ್ಟರೂ ಫಲವಿಲ್ಲ. ಪ್ರಪಂಚ ಹಾಳಾಗಿದೆ. ಯಾರೂ ಕಷ್ಟಪಟ್ಟು ಕೆಲಸ ಮಾಡುವುದಿಲ್ಲ ಗುರಿ ಇಟ್ಟುಕೊಳ್ಳು ವುದು ವ್ಯರ್ಥ. ಯಾರೂ ನಮಗೆ ಸಹಾಯ ಮಾಡುವುದಿಲ್ಲ ಇತ್ಯಾದಿ. ನಕಾರಾತ್ಮಕ ಆಲೋಚನೆಗಳಿಂದ ಹೊರಬರಲು ಮತ್ತು ಧನಾತ್ಮಕ ಆಲೋಚನಾ ಧಾಟಿಯನ್ನು ಬೆಳೆಸಿಕೊಳ್ಳಲು ಮಾರ್ಗದರ್ಶನ ಮಾಡಲಾಗುತ್ತದೆ.



4. ಕೆಲವರು ದೊಡ್ಡ ಗುರಿ ಉದ್ದೇಶಗಳನ್ನಿಟ್ಟುಕೊಳ್ಳುತ್ತಾರೆ. ಅವನ್ನು ಹೇಗೆ ಮುಟ್ಟುವುದೆಂದು ಪರಿತಪಿಸುತ್ತಾರೆ. ನಿರಾಶರಾಗುತ್ತಾರೆ. ಆದರೆ ಕೆಲವರು ಯಾವೊಂದು ಗುರಿ ಉದ್ದೇಶಗಳಿಲ್ಲದೆ ಬದುಕುತ್ತಾರೆ. ಆಪ್ತ ಸಮಾಲೋಚನೆಯಲ್ಲಿ ಈ ಎರಡೂ ಗುಂಪಿನವರಿಗೆ ನೆರವು ನೀಡಲಾಗುತ್ತದೆ. ಗುರಿ ಮುಟ್ಟಲು ಏನು ಮಾಡಬಹುದು , ಅಲ್ಪಕಾಲಿನ -ದೀರ್ಘಕಾಲಿನ ಗುರಿಗಳು ಏನಿರಬೇಕೆಂಬುದನ್ನು ಚರ್ಚಿಸಲಾಗುತ್ತದೆ.

5. ಒಂಟಿತನದ ಭಾವನೆಯನ್ನು ನಿವಾರಿಸಲಾಗುತ್ತದೆ. ವ್ಯಕ್ತಿಗೆ ಆಸರೆ ನೀಡುವ ಹಾಗೂ ವ್ಯಕ್ತಿ-ವ್ಯಕ್ತಿ ನಡುವಿನ ಸಂಬಂಧ ವನ್ನು ಸುಧಾರಿಸಲು ಪ್ರಯತ್ನವನ್ನು ಹಾಗೂ ಪರ್ಯಾಯ ಮಾರ್ಗಗಳ ಬಗ್ಗೆ ಮಾರ್ಗದರ್ಶನ ಮಾಡಲಾಗುತ್ತದೆ ಹಾಗೂ ವ್ಯಕ್ತಿ ಮತ್ತು ಮನೆಯವರನ್ನು ಆವರಿಸಿರುವ ಭಯ, ಖಿನ್ನತೆ, ದುಗುಡ, ದುಃಖ, ಮತ್ತು ಕೋಪವನ್ನು ತಗ್ಗಿಸಲು ಮಾರ್ಗದರ್ಶನವನ್ನು ನೀಡಲಾಗುತ್ತದೆ.

ಸಂಪ್ರದಾಯಕ್ಕಿಂತ ಸತ್ಯ ಶ್ರೇಷ್ಟ... ಸತ್ಯಕ್ಕಿಂತ ಕಲ್ಯಾಣ ಶ್ರೇಷ್ಟ...?

ಲಿಂಗಾನಂದ ಅಪ್ಪಾಜಿಯವರ ಹುಟ್ಟುಹಬ್ಬದಂದು ಜನ್ಮ ತಳೆದ ರಾಷ್ಟ್ರೀಯ ಬಸವ ದಳಗಳು ಶರಣ-ರ ಜಯಂತಿಗಳಂದು ರಕ್ತದಾನ ಶಿಬಿರ, ಆಸ್ಪತ್ರೆಗಳಿಗೆ ತರಳಿ ಅನಾಥ-ಬಡ ರೋಗಿಗಳಿಗೆ ಹಾಲುಹಣ್ಣು ವಿತರಣೆ, ಶರಣ ಮೇಳ, ಕಲ್ಯಾಣ ಪರ್ವಗಳಂಥ ದೊಡ್ಡ ಕಾರ್ಯಕ್ರಮಗಳಲ್ಲಿ ಸ್ವಯಂಸ್ಫೂರ್ತಿಯಿಂದ ಹಗಲುರಾತ್ರಿ ಸೇವೆ ಮಾಡುವ ಮೂಲಕ ಕಾರ್ಯಕ್ರಮಗಳ ಯಶಸ್ಸಿನಲ್ಲಿ ಈ ಸಂಘಟನೆಗಳ ಪಾಲು ಸೇರಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಅಲ್ಲದೆ ದೇಶ, ಸಮಾಜ, ಧರ್ಮಕ್ಕೆ ಅನ್ಯಾಯವಾದಾಗ ಹೋರಾಟ, ಚಳುವಳಿಗಳ ಮೂಲಕ ಸಾತ್ವಿಕ ಪ್ರತಿಭಟನೆ-ಹೀಗೆ ಹಲವು ಸಕ್ರಿಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ತಮ್ಮ ಅಸ್ತಿತ್ವವನ್ನು ಸಾಬೀತು ಪಡಿಸುತ್ತಿವೆ.

ಒಟ್ಟಾರೆ ಹೇಳುವುದಾದರೆ ಪೂಜ್ಯ ಮಾತಾಜಿಯವರು ಅಂದು ವಿಶ್ವ ಕಲ್ಯಾಣ ಮಿಷನ್ ಸ್ಥಾಪಿಸುವಾಗ ಯಾವ ಧ್ಯೇಯೋದ್ದೇಶಗಳಿದ್ದವೊ ಆ ಧ್ಯೇಯೋದ್ದೇಶಗಳೆಲ್ಲ ಸೃಷ್ಟಿಕರ್ತ ಲಿಂಗದೇವನ ಕರುಣೆ, ವಿಶ್ವಗುರು ಬಸವಣ್ಣನವರ ಅನುಗ್ರಹ, ಪೂಜ್ಯ ಅಪ್ಪಾಜಿ ಮತ್ತು ಮಾತಾಜಿಯವರ ಸಂಕಲ್ಪ ಅಲ್ಲದೆ ಬಸವ ಭಕ್ತರ ತನುಮನಧನದಿಂದ ಕೂಡಿದ ಸಹಕಾರ ಎಲ್ಲವೂ ಸೇರಿ ಪೂಜ್ಯರ ಜೀವಿತಾವಧಿಯಲ್ಲಿಯೇ ಇಂದು ಸಾಕಾರ ರೂಪ ಪಡೆದಿರುವುದು ನೋಡಿದಾಗ ಬೆರಗಾಗುತ್ತದೆ. ಇಂಥ ವೈಶಿಷ್ಟ್ಯಪೂರ್ಣವಾದ ಸಂಸ್ಥೆಯಲ್ಲಿ ಸೇವೆ ಮಾಡುವ ಭಾಗ್ಯವನ್ನು ಕರುಣಿಸಿದ ಪೂಜ್ಯ ಅಪ್ಪಾಜಿಯವರು ಮತ್ತು ಮಾತಾಜಿಯವರಿಗೆ ಈ ಲೇಖನಿ ಧನ್ಯತೆಯಿಂದ ವಂದಿಸುತ್ತಿದೆ.



ಶರಣ-ಶರಣೆಯರಿಗೆ ಗುರು ಬಸವಣ್ಣನವರು ಹಾಗೂ ಲಿಂಗದೇವರು ಸುಖ, ಸಂತೃಪ್ತಿ ನೀಡಲಿ



111 ಅಡಿ ಎತ್ತರದ ಬಸವ ಪುತ್ಥಳಿ

ಬೆಂಗಳೂರು–ಮೈಸೂರು ಹೆದ್ದಾರಿಯ ಮೇಲಿರುವ ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ

ಬೆಂಗಳೂರಿನಿಂದ ಮೈಸೂರು ಹೆದ್ದಾರಿಯ ಮೇಲೆ 20 ಕಿಲೋಮೀಟರ್ ದೂರದಲ್ಲಿ ವಿಶ್ವಕಲ್ಯಾಣ ಮಿಷನ್ ಒಡೆತನದ 'ಬಸವ ಗಂಗೋತ್ರಿ' ಎಂಬ ಆಶ್ರಮವಿದೆ. ಇಲ್ಲಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಹೆಸರಿನ ಜ್ಞಾನಪೀಠವೂ ಸ್ಥಾಪನೆಯಾಗಿ ಇದಕ್ಕೆ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾಧಿಪತಿಗಳಾಗಿದ್ದಾರೆ. ಇಲ್ಲಿ ಅನಾಥಾಲಯ ಮತ್ತು ವೃದ್ಧಾಶ್ರಮಗಳು ನಡೆಯುತ್ತಲಿವೆ. ತೆಂಗಿನ ತೋಟದೊಡನೆ ಸುಂದರವಾದ ಪರಿಸರ ಹೊಂದಿರುವ ಬಸವ ಗಂಗೋತ್ರಿಯಲ್ಲಿ ಗುರು ಬಸವಣ್ಣನವರ ಬೃಹತ್ ಪುತ್ಥಳಿ ಆಗಬೇಕೆಂದು ವಿಶ್ವಕಲ್ಯಾಣ ಮಿಷನ್ ಚೇರ್ಮನ್ನರಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅಪೇಕ್ಷಿಸಿದ್ದರು. ಆದ್ದರಿಂದ 111 ಅಡಿ ಬೃಹತ್ ಪುತ್ಥಳಿಗೆ ಶಂಕುಸ್ಥಾಪನೆ ಸಹ ಮಾಡಲಾಗಿದೆ. ಮಟ್ಟಸವಾದ ಬಯಲಿನಲ್ಲಿ ಮಾಡಬೇಕಾಗಿರುವುದರಿಂದ 6 ಮೆಟ್ಟಲಿನ 30 ಅಡಿ ಎತ್ತರದ ಪೀಠವನ್ನು ಮಾಡಿ ಅದರ ಮೇಲೆ ಇಷ್ಟಲಿಂಗ ಪೂಜೆ–ತ್ರಾಟಕ ಯೋಗದಲ್ಲಿ ನಿರತ ಗುರು ಬಸವಣ್ಣನವರನ್ನು ರೂಪಿಸಲಾಗುವುದು.

ಪೀಠದ ಕೆಳಭಾಗದಲ್ಲಿ ಒಂದು ಧ್ಯಾನ ಮಂಟಪವನ್ನು ಮತ್ತು ಸಪ್ತ ಗಣಾಧೀಶರ ಮೂರ್ತಿಗಳು ಸಹಿತವಾದ ಶರಣ ಮಂಟಪವನ್ನು– ಹೀಗೆ 3 ಅಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಷಡ್ಗಣಾಧೀಶರಾದ ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು, ಚಿನ್ಮಯಜ್ಞಾನಿ ಚನ್ನಬಸವಣ್ಣ, ಲಿಂಗಾಂಗಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರ ಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರ ಗವಿಗಳನ್ನು ಗೋಳಾಕಾರದಲ್ಲಿ ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಶರಣೋದ್ಯಾನವನ್ನು ನಿರ್ಮಿಸಲಾಗುವುದು. ಧರ್ಮಪಿತ ಬಸವಣ್ಣನವರ ತತ್ತ್ವಗಳ ಪ್ರಚಾರ ಮಾಡಲು ಬೃಹತ್ ಸ್ಮಾರಕಗಳು ಸಾಧಕವಾಗುತ್ತವೆಂಬ ಮನೀಷೆಯಿಂದ ಈ ಬೃಹತ್ ಪುತ್ಥಳಿಯನ್ನು ನಿರ್ಮಿಸಲಾಗುತ್ತಿದೆ. ಬಸವ ಗಂಗೋತ್ರಿಯಲ್ಲಿ ನಡೆಯುತ್ತಿರುವ ಅನಾಥಾಲಯ, ವೃದ್ಧಾಶ್ರಮಗಳಿಗೆ ಸ್ವತಂತ್ರವಾದ ಕಟ್ಟಡ ಆಗಬೇಕಾಗಿದೆ. ಆದ್ದರಿಂದ ಈ ಎಲ್ಲ ಕೆಲಸಗಳಿಗೆ ಉದಾರವಾದ ಧನಸಹಾಯದ ಅಗತ್ಯವಿದೆ.

ಬಸವ ಗಂಗೋತ್ರಿಯ ಕೆಲಸಗಳು ವಿಶ್ವಕಲ್ಯಾಣ ಮಿಷನ್ ಸಂಸ್ಥೆಯಿಂದ ನಡೆಯುತ್ತಿದ್ದು ಇದಕ್ಕೆ 80ಜಿ ಇನ್‌ಕಂ ಟ್ಯಾಕ್ಸ್ ಸೌಲಭ್ಯವಿದೆ.


ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:

✠ ಪೂಜ್ಯ ಶ್ರೀ ಜಗದ್ಗುರು ಡಾ.ಮಾತೆ ಮಹಾದೇವಿ ಬಸವ ಮಂಟಪ ರಾಜಾಜಿನಗರ, ಬೆಂಗಳೂರು–560 010. 9448137508, 9449588669



ಲಿಂಗವೇ ದೇವರು,
ಬಸವಣ್ಣನೇ ಗುರು





Registered with Registrar of News Papers in India, New Delhi No.19988/70 Postal Registration (SSP os BG-West Dn) No.KA/BGW-50/WPP-17/2015-17, Linced to Post the Printed Magazine without Prepayment (WPP-17). Posted at Bengaluru PSO. Mysuru Road (Bg-560026) on 3rd, 10th, 20th of every month. Pages 40+4 (Cover Pages)